ಸಂಪುಟ 01 | ಸಂಚಿಕೆ 175 | ಮಂಗಳವಾರ 19 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಮೇ ರೇ ದಿನ

ಮೇ 19 ವರ್ಷದ ಸಮಯ ರಾಷ್ಟ್ರೀಯ ಮೇ ರೇ ದಿನವು ಪ್ರಕಾಶಮಾನವಾದ ಸೂರ್ಯನ ಬೆಳಕು, ಬೆಚ್ಚಗಿನ ಹವಾಮಾನವನ್ನು ಆಚರಿಸುತ್ತದೆ ಮತ್ತು ನಿಮ್ಮ ಚರ್ಮವನ್ನು ತಂಪಾಗಿಸಲು ಸ್ವಲ್ಪ ತಂಗಾಳಿಯೊಂದಿಗೆ. ಹೊರಗೆ ಹೋಗಿ ಸ್ವಲ್ಪ ವಸಂತ ಹವಾಮಾನವನ್ನು ಆನಂದಿಸಿ! ನಿಮ್ಮ ಹೆಸರು ರೇ ಅಥವಾ ಮೇ ಆಗಿದ್ದರೆ, ಹೊರಾಂಗಣಕ್ಕೆ ಹೋಗಿ ಸ್ವಲ್ಪ ಸೂರ್ಯನನ್ನು ಹೀರಿಕೊಳ್ಳಲು ನಿಮ್ಮ ಹೆಸರನ್ನು ಬಳಸಲು ಇದು ನಿಮಗೆ ಅವಕಾಶ. ಎಲ್ಲಾ ನಂತರ, ಈ ವಸಂತ ರಜಾದಿನವು ಸೂರ್ಯನ ಬೆಳಕಿನಲ್ಲಿ ಹೊರಬಂದು ಕೆಲವು ಕಿರಣಗಳನ್ನು ಹೀರಿಕೊಳ್ಳುವುದರ ಬಗ್ಗೆ.

## ಸುಭಾಷಿತ

ಪ್ರಜಾಪ್ರಭುತ್ವ ಬರಿಯ ಬಲವಲ್ಲ. ಬರಿಯ ಬಹುಮತವೇ ಅಲ್ಲ. ಹಕ್ಕುಗಳಿಗಿಂತಲೂ ಹೆಚ್ಚಾಗಿ ಜವಾಬ್ದಾರಿ ಬಯಸುವ ವ್ಯವಸ್ಥೆ.

–ಬಿ.ಎಂ. ಶ್ರೀಕಂಠಯ್ಯ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಸರ್ಕಾರದ ಸಾಧನೆಗಳ ಅನಾವರಣಕ್ಕೆ 'ಸಾಧನಾ ಸಮಾವೇಶ'

# ಶಕ್ತಿ ಪ್ರದರ್ಶನಕ್ಕಲ್ಲ :ಪರಮೇಶ್ವರ್

**ಬೆಂಗಳೂರು: ತುಮಕೂರಿನಲ್ಲಿ ನಾಳೆ ನಡೆಯುತ್ತಿರುವ ಸಾಧನಾ ಸಮಾವೇಶ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಬಿಂಬಿಸುವ ವೇದಿಕೆಯೇ ಹೊರತು, ಯಾವುದೇ ನಾಯಕರ ಶಕ್ತಿ ಪ್ರದರ್ಶನವಲ್ಲ ಎಂದು ಸಚಿವ ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.**

ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗಿವೆ. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಎಂಬ ಎರಡು ರೀತಿ ವಿಂಗಡಿಸಲಾಗಿತ್ತು. ಅಲ್ಪಾವಧಿ ಭರವಸೆಗಳನ್ನು ಬಹುತೇಕ ಈಡೇ–ರಿಸಿದ್ದೇವೆ. ನೀರಾವರಿ ಮೂಲ ಸೌಕರ್ಯ ಅಭಿವೃದ್ಧಿಯಂತಹ ದೀರ್ಘಾವಧಿಯಂತಹ ಯೋಜನೆಗಳು ಅನುಷ್ಠಾನವಾಗಬೇಕಿದೆ. ಅವುಗಳನ್ನು ಹಂತಹಂತವಾಗಿ ಸರ್ಕಾರ ಜಾ–ರಿಗೊಳಿಸಲಾಗುವುದು ಎಂದು ಹೇಳಿದರು.

ಸಾಕಷ್ಟು ಕಂದಾಯ ಗ್ರಾಮಗಳ ಘೋಷಣೆಯಾಗಿದೆ. ಪೌತಿ ಖಾತೆ ಸೇ–ರಿದಂತೆ ಸುಮಾರು 1.52 ಲಕ್ಷ



ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಣೆ ಮಾಡುತ್ತಿದ್ದೇವೆ ಹಾಗೂ ನುಡಿದಂತೆ ನಡೆದಿದ್ದೇವೆ ಎಂದು ಜನರಿಗೆ ತಿಳಿಸುವುದು ನಮ ಕರ್ತವ್ಯ. ಆ ನಿಟ್ಟಿನಲ್ಲಿ ಸಮಾವೇಶ ನಡೆಸಲಾಗುತ್ತಿದೆ ಎಂದು ಹೇಳಿದರು. ಇಲ್ಲಿ ವ್ಯಕ್ತಿಗತವಾಗಿ ನನ್ನದಾಗಲಿ ಅಥ–ವಾ ಬೇರೆ ಯಾವುದೇ ನಾಯಕರ ಶಕ್ತಿ ಪ್ರದರ್ಶನವಾಗುವುದಿಲ್ಲ ಎಂದು ಪುನರುಚ್ಚ–ರಿಸಿದರು.ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗಿವೆ. ಯಾವೆಲ್ಲಾ ಭರವಸೆಗಳನ್ನು ಈಡೇರಿಸಿದ್ದೇವೆ, ಏನೆಲ್ಲಾ ಮಾಡಿದ್ದೇವೆ ಎಂದು ತಿಳಿಸಬೇಕಿದೆ. ಜನ–ರಿಗೂ ಅದನ್ನು ತಿಳಿದುಕೊಳ್ಳುವ ಹಕ್ಕಿದೆ ಎಂದು ಪರಮೇಶ್ವರ್ ಹೇಳಿದರು.

ಅಧಿಕಾರ ಹಂಚಿಕೆ, ಸಚಿವ ಸಂಪುಟ ಪುನರ್‌ರಚನೆ ಸೇರಿದಂತೆ ಇಲ್ಲಿ ಯಾವುದೇ ವಿಚಾರಗಳು ಪ್ರಸ್ತಾಪವಾಗುವುದಿಲ್ಲ. ಇದು ಪಕ್ಷದ ಕಾರ್ಯಕ್ರಮವಲ್ಲ, ಸರ್ಕಾರಿ ಕಾರ್ಯಕ್ರಮ. ಹೀಗಾಗಿ ಹೈಕಮಾಂಡ್ ನಾಯಕರಿಗೆ ಆಹ್ವಾನ ನೀಡಿಲ್ಲ ಎಂದು ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ಸಾರಿಗೆ ನೌಕರರು ಮುಷ್ಕರಕ್ಕೆ ಮುಂದಾಗಿರುವ ಕುರಿತು ಪ್ರತಿಕ್ರಿಯಿಸಿದ ಅವರು, ನಾನು ಸಾರಿಗೆ ನೌಕರರ ಸಂಘಟನೆಗಳ ಜೊತೆ ಚರ್ಚೆ ನಡೆಸಿದ್ದೇನೆ.

ಬೇಡಿಕೆಗಳ ಬಗ್ಗೆ ಸಾಧನಾ ಸಮಾವೇಶ ಮುಗಿದ ಬಳಿಕ ಮೇ 20ರ ನಂತರ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಲು ಸಮಯಾವಕಾಶ ಕೊಡಿಸುವುದಾಗಿ ತಿಳಿಸಲಾಗಿದೆ. ಅವರು ಬಯಸಿದರೆ, ಮುಖ್ಯಮಂತ್ರಿ ಅವರ ಜೊತೆ ಚರ್ಚೆಗೆ ಸಮಯ ನಿಗದಿ ಮಾಡಲಾಗುವುದು ಎಂದರು. ಸಾಧನಾ ಸಮಾವೇಶಕ್ಕೆ ಕಪ್ಪು ಬಾವುಟ ಪ್ರದರ್ಶಿಸಲು ಹೋರಾಟಗಾರರು ಮುಂದಾಗಿದ್ದರು. ಈ ಕುರಿತು ಮನವಿ ಮಾಡಿದಾಗ ಕಪ್ಪು ಬಾವುಟ ಪ್ರದರ್ಶನಗಳನ್ನು ಕೈ ಬಿಟ್ಟಿದ್ದಾರೆ ಎಂದು ಹೇಳಿದರು.

## ತಾಲೂಕು ಪಂಚಾಯತ ಆವರಣದಲ್ಲಿ ಪಂಚ ಗ್ಯಾರೆಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ




ನೈಜ್ಯ ದೆಸೆ ನ್ಯೂಸ್

**ಅಫಜಲಪುರ: ತಾಲೂಕು ಪಂಚಾಯತ ಸಭಾಂಗಣದಲ್ಲಿ ರಾಜ್ಯ ಸರಕಾರದ ಪ್ರಮುಖ ಯೋಜನೆಗಳಾದ ಪಂಚ ಗ್ಯಾರೆಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಜರುಗಿತು.**

ಸಭೆಯನ್ನುದ್ದೆಶಿಸಿ ಮಾತನಾಡಿದ ಪಂಚ ಗ್ಯಾರೆಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಪ್ರಕಾಶ ಜಮಾದಾರ ಕಾಂಗ್ರೆಸ್ ಸರಕಾರ ಸತತ ಮೂರು ವರ್ಷಗಳಿಂದ ರಾಜ್ಯದ ಎಲ್ಲಾ ವರ್ಗದ ಜನರಿಗೆ ಐದು ಗ್ಯಾರೆಂಟಿ ಯೋಜನೆಗಳನ್ನು ಸಮರ್ಪಕವಾಗಿ ನೀಡುತ್ತ ಬರುತ್ತಿದೆ. ತಾಲ್ಲೂಕಿನ ಅತಿಹೆಚ್ಚು ಮಹಿಳೆಯರು ಗೃಹಲಕ್ಷ್ಮಿ ಯೋಜನರಯ ಸದುಪಯೋಗ ಪಡಿಸಿಕೊಂಡಿದ್ದಾರೆ.

ಅದಲ್ಲದೇ ಐದು ಯೋಜನೆಗಳ ಉಪಯೋಗ ಎಲ್ಲಾ ಜನರಿಗೆ ತಲುಪಿಸುವಲ್ಲಿ ನಮ್ಮ ಸಮಿತಿಯ ಸದಸ್ಯರು ಸತತ ಪ್ರಯತ್ನ ಮಾಡುತ್ತಿರುವುದು ನನಗೆ ಹೆಮ್ಮೆಯಿದೆ. ಇನ್ನೂ ಯಾರಾದರೂ ಸರಕಾರದ ಈ ಪಂಚ ಗ್ಯಾರೆಂಟಿ ಯೋಜನೆಗಳ ಉಪಯೋಗ ಪಡೆದುಕೊಳ್ಳದೆ ಇದ್ದಲ್ಲಿ ಅರ್ಹ ಫಲಾನುಭವಿಗಳಿಗೆ ಈ ಯೋಜನೆಗಳ ಲಾಭ ಪಡೆದುಕೊಳ್ಳಲು ತಿಳಿಸಬೇಕು ಎಂದರು. ಇದೆ ಸಂದರ್ಭದಲ್ಲಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು,ಪಂಚ ಗ್ಯಾರೆಂಟಿ ಅನುಷ್ಠಾನ ಸಮಿತಿ ತಾಲೂಕು ಸದಸ್ಯರಾದ ದುಂಡು ಜಮಾದಾರ, ಪ್ರವೀಣ ಕಲ್ಲೂರ,ಬಿಸ್ಮಿಲ್ಲಾ ಪಿರವಾಲೆ,ದತ್ತು ಗಾಣೂರ,ಸೇ–ರಿದಂತೆ ಹಲವರು ಉಪಸ್ಥಿತರಿದ್ದರು.

## ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಎಂ.ಎಸ್.ಸರಶೆಟ್ಟಿ ಆಯ್ಕೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದ ಎ.ಪಿ.ಎಂ.ಸಿ ಸಭಾಭವನದಲ್ಲಿ ಭಾನುವಾರ ಸಂಜೆ ನಡೆದ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಸಭೆಯಲ್ಲಿ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಎಂ.ಎಸ್.ಸರಶೆಟ್ಟಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಅಮರೇಶ ಅಂಗಡಿ (ತುಂಬಗಿ), ತಾಲ್ಲೂಕಾ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಸುರೇಖಾ ಸಾಲಂಕಿ ಅವರನ್ನು ಆಯ್ಕೆ ಮಾಡಲಾಯಿತು.**

ಸಂಘದ ರಾಜ್ಯ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ರೂಢಗಿ. ಪ್ರಧಾನ ಕಾರ್ಯದರ್ಶಿ ಶಿವಾನಂದ ಬಿದರಿಯವರು ಆಯ್ಕೆಯನ್ನು ಘೋಷಣೆ ಮಾಡಿದರು. ತಾಲ್ಲೂಕಿನ ಕಲಕೇರಿ, ತುಂಬಗಿ, ಚಬನೂರ, ಅಸ್ಕಿ, ಮೊದಲಾದ ಗ್ರಾಮಗಳು ಸೇರಿದಂತೆ ನಗರದ ಸಮಾಜ



ಬಾಂಧವರು ಸಭೆಯಲ್ಲಿ ಭಾಗವಹಿಸಿದ್ದರು. ರಾಜ್ಯಕಾರ್ಯಕಾರಿಣಿ ಸದಸ್ಯರಾದ ರಮೇಶ ಸಾಲಂಕಿ ಹಾಗೂ ಮುತ್ತು ಕಿಣಗಿ(ಬ ಬಾಗೇವಾಡಿ), ನಗರ ಘಟಕದ ಅಧ್ಯಕ್ಷ ಎಂ.ಆರ್.ಕತ್ತಿ, . ಗೌರವಾಧ್ಯಕ್ಷ ಈರಣ್ಣ ಕಲಬುರ್ಗಿ, ನಗರ ಘಟಕದ ಮಹಿಳಾ ಅಧ್ಯಕ್ಷೆ ಶಿಲ್ಪಾ ಕಿಣಗಿ, ಯುವಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಸರಶೆಟ್ಟಿ, ಗಂಗಾಧರ ಕಸ್ತೂರಿ, ಚನಬಸ್ಸು ಸರಶೆಟ್ಟಿ, ಅಶೋಕ ಬಳಗಾನೂರ, ಮುರಿಗೆಪ್ಪ ಜಮ್ಮಲದಿನ್ನಿ, ಅಣ್ಣು ವಾಲಿ, ಸಿ.ಆರ್.ಕತ್ತಿ, ಮಲ್ಲಿಕಾರ್ಜುನ ಪಾಲ್ಕಿ, ಮಹಾನಂದ ತಿಳಗುಳ, ಸಂಗೀತಾ ಬಳಗಾನೂರ ಮೊದಲಾದವರು ಉಪಸ್ಥಿತರಿದ್ದರು. ಸಂಗಮೇಶ ಪಾಲ್ಕಿ ನಿರ್ವಹಿಸಿದರು. ಜಿ.ಎಸ್. ಜಮ್ಮಲದಿನ್ನಿ, ವಂದಿಸಿದರು.

## ಸಮಾಜದ ಅಭಿವೃದ್ಧಿ ಒಗ್ಗಟ್ಟಿನಿಂದಲೇ ಸಾಧ್ಯ: ಶಿಕ್ಷಕ ಸಜ್ಜನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಾಲಕರು ತಮ್ಮ ಮಕ್ಕಳಿಗೆ ಕೇವಲ ಗುಣಮಟ್ಟದ ಶಿಕ್ಷಣವನ್ನು ನೀಡಿದರೆ ಸಾಲದು ಅವರಿಗೆ ಒಳ್ಳೆಯ ಸಂಸ್ಕಾರಗಳನ್ನೂ ಕಲಿಸಿಕೊಡಬೇಕು. ಭೌತಿ–ಕ ಆಸ್ತಿಯನ್ನೇ ಸಂಪಾದಿಸುವುದಕಿಂ–ತ ಹೆಚ್ಚಾಗಿ ಮಕ್ಕಳನ್ನೇ ಒಂದು ಅಮೂಲ್ಯ ಆಸ್ತಿಯನ್ನಾಗಿ ಮಾಡಲು ಪ್ರಯತ್ನಿಸಬೇಕು ಎಂದು ಶಿಕ್ಷಕ ಎಸ್ ಬಿ ಸಜ್ಜನ ಹೇಳಿದರು.**

ಪಟ್ಟಣದ ಶ್ರೀ ನೀಲಕಂಠೇಶ್ವರ ದೇವಸ್ಥಾನ ಸಭಾಂಗಣದಲ್ಲಿ ಭಾನುವಾರ ಸಂಜೆ ಸಜ್ಜನ ಗಾಣಿಗರ ಸೇವಾ ಸಂಘ(ರಿ) ವತಿಯಿಂದ ಆಯೋಜಿಸಿದ್ದ 2025–26 ನೇ ಸಾಲಿನ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಶೇ.85 ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು. ಸಮಾಜದ ಒಗ್ಗಟ್ಟಿನಿಂದ ಎಂಥಹ ದೊಡ್ಡ ಕಾರ್ಯವನ್ನಾದರೂ ಮಾಡಬಹುದು



ಎಂಬುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿಯಾಗಿದೆ. ಸಂಘದಿಂದ ಸಮಾಜದ ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸಿ ಪ್ರೋತ್ಸಾಹಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯವಾದ ಕಾರ್ಯವಾಗಿದೆ ಎಂದರು.

ಸಜ್ಜನ ಗಾಣಿಗರ ಸೇವಾ ಸಂಘದ ನಿರ್ದೇಶಕ ಕಾಶಿನಾಥ ಪ್ರಸ್ತಾವಿಕವಾಗಿ ಮಾತನಾಡಿ ಸಜ್ಜನ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಕಾರ್ಯವನ್ನು ಸಂಘದ ವತಿಯಿಂದ ಮಾಡಲಾಗುತ್ತಿದೆ ಇದ–ರಿಂದ ಅವರು ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ಸಾಧನೆಯನ್ನು ಮಾಡಲಿ ಎಂಬುದು ಇದರ ಉದ್ದೇಶವಾಗಿದೆ ಎಂದರು. ಸಜ್ಜನ ಗಾಣಿಗರ ಸೇವಾ ಸಂಘದ ಅಧ್ಯಕ್ಷ ಪ್ರಕಾಶ ಸಜ್ಜನ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಸಮಾಜದ ಗಣ್ಯರಾದ ಶರಣಪ್ಪ ಸಜ್ಜನ, ಬಸವರಾಜ ಜಾಲಿಬೆಂಚಿ, ಪ್ರಕಾಶ ಸಜ್ಜನ ಬಿಳವಾರ,ತಿಪ್ಪಣ್ಣ ಸಜ್ಜನ, ವಿದ್ಯಾರ್ಥಿಗಳ ಪೋಷಕರು ಹಾಗೂ ಸಜ್ಜನ ಸಮಾಜದ ಗಣ್ಯರು ಹಿರಿಯರು ಉಪಸ್ಥಿತರಿದ್ದರು. ಜಯಶ್ರೀ ಸಜ್ಜನ ಪ್ರಾರ್ಥಿಸಿದರು.ಎಸ್.ಬಿ.ಸಜ್ಜನ ಸ್ವಾಗತಿಸಿದರು. ಕಾಶಿನಾಥ ಸಜ್ಜನ ನಿರೂಪಿಸಿದರು. ಬಸವರಾಜ ಸಜ್ಜನ ವಂದಿಸಿದರು.

## ಇಂದು ಎಸ್‌ಐಒ ತಾಲೂಕು ಸಂಘಟನೆಯಿಂದ ಬೃಹತ್ ಪ್ರತಿಭಟನೆ: ಜಿಲ್ಲಾಧ್ಯಕ್ಷ ಇಮ್ತಿಯಾಜ್.

ನೈಜ್ಯ ದೆಸೆ ನ್ಯೂಸ್

**ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅತಿದೊಡ್ಡ ನೀಟ್ ಪರೀಕ್ಷೆ ಸೋರಿಕೆಯಾಗಿರುವುದು, ರದ್ದತಿಯಾಗಿ ಮರುಪರೀಕ್ಷೆ ಆಗಿರುವುದು ಎನ್.ಟಿಎ ಏಜೆನ್ಸಿ ನೀಟ್ ಪರೀಕ್ಷೆಯ ಪಾವಿತ್ರತೆ ಕಾಪಾಡುವಲ್ಲಿ ವಿಫಲವಾಗಿದೆ ಎಂದು ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಶನ್ ಆಫ್ ಇಂಡಿಂ–ಯಾ (ಎಸ್‌ಐಒ) ಜಿಲ್ಲಾಧ್ಯಕ್ಷ ಇಮ್ತಿಯಾಜ್ ಹೇಳಿದರು.**

ನಗರದ ಪತ್ರಿಕಾ ಭವನದಲ್ಲಿ ಮೇ.18 ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನೀಟ್ ಪರೀಕ್ಷೆ ರದ್ದತಿ ಮತ್ತು ಮರುಪರೀಕ್ಷೆಯನ್ನು ಎಸ್‌ಐಒ ಸಂಘಟನೆಯು ರಾಜ್ಯದಾದ್ಯಂತ ತೀವ್ರವಾಗಿ ಸೋರಿಕೆ ಕ್ರಮವನ್ನು ವಿರೋಧ ವ್ಯಕ್ತಪಡಿಸುತ್ತಿದ್ದೇವೆ, ಈ ನೀಟ್ ಪರೀಕ್ಷೆಯನ್ನ ಭಾರತದಲ್ಲಿ 22 ಲಕ್ಷಕ್ಕೂ ಅಧಿಕ ಜನ ಪರೀಕ್ಷೆ ಬರೆದಿದ್ದಾರೆ. ವಿದ್ಯಾರ್ಥಿಗಳು ಪರೀಕ್ಷೆ




ರದ್ದಾದ ಕಾರಣದಿಂದ ಮಾನಸಿಕ ಹಾಗೂ ಆರ್ಥಿಕ ಒತ್ತಡಕ್ಕೆ ಸಿಲುಕಿ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಈಗಾಗಲೇ ರಾಜಸ್ಥಾನದಲ್ಲಿ ಓರ್ವ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಕೊಂಡಿದ್ದಾನೆ. ನೀಟ್ ಪರೀಕ್ಷೆಯಲ್ಲಿ ಒಂದು ಸಂಘಟಿತವಾದ ಭ್ರಷ್ಟಾಚಾರ ಸರ್ಕಾರದಿಂದ ಆಗಿದೆ. ನಮ್ಮನ್ನು ರಕ್ಷಿಸುವವರೇ ಭಕ್ಷಕರಾದರೆ ಇನ್ಯಾರಿಗೆ ಹೇಳಬೇಕು. ಇದು ಕೇವಲ ಒಂದು ಪರೀಕ್ಷೆಯಲ್ಲ, ಸತತವಾಗಿ ಒಂದು ವರ್ಷದ ಶ್ರಮವನ್ನು ಹೊಳೆಯಲ್ಲಿ ಹುಣಿಸೆ ಹಣ್ಣನ್ನು ತೊಳೆದಹಾಗೆ ಆಗಿದೆ. ಸೋರಿಕೆಯಾದ ವಿದ್ಯಾರ್ಥಿಗಳ ಸಮುದಾಯಕ್ಕೆ ಬಹಳ ಘೋರವಾದಂತಹ ಅಗೌರವ ಆಗಿದೆ. ಈ ಎಲ್ಲಾ ಕಾರಣಗಳಿಂದ ಮೇ.19 ರಂದು ಮಂಗಳವಾರ ಎಸ್‌ಐಒ ಸಂಘಟನೆ, ವಿದ್ಯಾರ್ಥಿಗಳ ಸಮೂಹದಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು, ಬೆಳಿಗ್ಗೆ ಸರಿಯಾಗಿ 9:30 ರಿಂದ ನಗರದ ನಗರಸಭೆ ಕಚೇರಿಯಿಂದ ತಹಶೀಲ್ದಾರ್ ಕಚೇರಿಯ ತನಕ ಮೆರವಣಿಗೆ ಮೂಲಕ ಆಗಮಿಸಿ, ತಹಶೀಲ್ದಾರ–ರಿಗೆ ಮನವಿ ಪತ್ರವನ್ನು ಸಲ್ಲಿಸಲಾಗುವುದು.

ಪ್ರಮುಖ ಬೇಡಿಕೆಗಳು:– ಕೇಂದ್ರೀಕೃತ ಪರೀಕ್ಷೆಗಳನ್ನು ಸುರಕ್ಷಿತವಾಗಿ ನಡೆಸುವಲ್ಲಿ ಎನ್.ಟಿಎ ಪದೇ ಪದೇ ವಿಫಲವಾಗುತ್ತಿರುವುದು ಪ್ರಸ್ತುತ ಮಾದರಿಯ ದೋಷ ಪೂರಿತವಾಗಿದೆ. ಪರೀಕ್ಷಾ ವ್ಯವಸ್ಥೆಯ ವಿಕೇಂದ್ರೀಕರಣ ಮತ್ತು ಏಜೆನ್ಸಿಯ ರಚನೆಯಲ್ಲಿ ಸಂಪೂರ್ಣ ಸುಧಾರಣೆ ತರಬೇಕು. ಕೇಂದ್ರದ ಶಿಕ್ಷಣ ಸಚಿವರು ಸರಣಿ ವೈಫಲ್ಯದ ನೈತಿಕ ಹೊಣೆಯನ್ನು ಹೊತ್ತು ತಕ್ಷಣವೇ ರಾಜೀನಾಮೆ ನೀಡಬೇಕು. ಪ್ರಶ್ನೆ ಪತ್ರಿಕೆ ಸೋರಿಕೆ ಜಾಲದಲ್ಲಿ ಭಾಗಿಯಾಗಿರುವ ಎಲ್ಲಾ ವ್ಯಕ್ತಿಗಳ ವಿರುದ್ಧ ಪಾರದರ್ಶಕ ಕಾಲಮಿತಿ ತನಿಖೆಯಾಗಬೇಕು. ಅವರಿಗೆ ಕಠಿಣ ಶಿಕ್ಷೆಯಾಗಬೇಕು. ನ್ಯಾಯಸಮ್ಮತ ಮತ್ತು ಸುರಕ್ಷಿತವಾಗಿ ಪರೀಕ್ಷೆಗಳನ್ನು ನಡೆಸುವಲ್ಲಿ ಪದೇ ಪದೇ ವಿಫಲವಾಗುತ್ತಿರುವ ಬಗ್ಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಉತ್ತ–ರಿಸಬೇಕು ಎಂದು ಬೇಡಿಕೆಗಳನ್ನು ಇಟ್ಟರು. ಈ ಸಂದರ್ಭದಲ್ಲಿ: ತಾಲೂಕು ಅದ್ಯಕ್ಷ ಅಫ್ಜಲ್ ಹುಸೇನ್, ತಾಲೂಕು ಕಾರ್ಯದರ್ಶಿ ಅಮೀರ್ ಸೊಹೈಲ್, ಕ್ಯಾಂಪಸ್ ಕಾರ್ಯದರ್ಶಿ ಯಾಹ್ಯ ರಜ್ವಿ, ಮಾಧ್ಯಮ ಕಾರ್ಯದರ್ಶಿ ಹಮ್ದನ್ ಜಕಿ, ಸದಸ್ಯರಾದ ಮೊಹಮ್ಮದ್ ಸುಲ್ತಾನ್, ನೌಮಾನ್ ಫೈಸಲ್, ಇದ್ದರು.

## ಸಾಹಿತ್ಯ ಸಿಂಚನ

ವೈದ್ಯ

ಬಿಳಿ ಕೋಟ್ ಧರಿಸಿದ ದೇವರ ರೂಪ,
ಬೇದನೆಯ ಮಧ್ಯೆ ಆಶೆಯ ದೀಪ.
ನೋವಿನ ನಾದ ಕೇಳುವ ಹೃದಯ,
ಜೀವ ಉಳಿಸುವುದು ಅವರ ವಿಧಿಯ.

ರಾತ್ರಿ ಹಗಲು ಮರೆತು ಸೇವೆ,
ಜೀವನ ರಕ್ಷಣೆ ಅವರ ದೇವೆ.
ಔಷಧದಲ್ಲಿ ಮಾತ್ರವಲ್ಲ ಚಿಕಿತ್ಸೆ,
ಮಾತಿನಲ್ಲೂ ಇರುತ್ತದೆ ಸಾಂತ್ವನ ಶಕ್ತಿ.

ಅಳುವ ಕಣ್ಣಿಗೆ ನಗು ತರುವರು,
ಅವಸರ ಕ್ಷಣದಲ್ಲಿ ಜೀವ ಉಳಿಸುವರು.
ಮಾನವತೆಯ ಮೌಲ್ಯ ಸಾರುವರು,
ವೈದ್ಯರು ನಿಜವಾದ ದೇವರು.

ರೋಗಿಯ ನಂಬಿಕೆ ಅವರ ಶಕ್ತಿ,
ಸೇವೆಯೇ ಅವರ ಬದುಕಿನ ಭಕ್ತಿ.
ಜಗದಲ್ಲಿ ಬೆಳಕು ಹರಡುವ ದಾರಿ,
ವೈದ್ಯರ ಸೇವೆ ಸದಾ ಪವಿತ್ರ ಕಾರ್ಯ.

ರಮೇಶ್

# ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆ

## ಸಾರ್ವಜನಿಕರಿಗೆ ನಿಗದಿತ ಸಮಯದಲ್ಲಿ ಸೌಲಭ್ಯ ದೊರೆಯಲಿ: ಜಿಲ್ಲಾಧಿಕಾರಿ ಎಸ್.ಪೂವಿತಾ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸಾರ್ವಜನಿಕರಿಗೆ ನಿಗದಿತ ಸಮಯದಲ್ಲಿ ಸರ್ಕಾರದ ಯೋಜನೆ, ಸೌಲಭ್ಯಗಳು ದೊರೆಯಬೇಕು. ಅಲ್ಲದೆ ಕಂದಾಯ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡಬೇಕೆಂದು ಜಿಲ್ಲಾಧಿಕಾರಿಗಳಾ ಎಸ್.ಪೂವಿತಾ ಅವರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಮೇ.18ರ ಸೋಮವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲೆಯ ವಿವಿಧ ತಾಲೂಕಿನ ತಹಶಿಲ್ದಾರರೊಂದಿಗೆ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ ಆಡಳಿತಾತ್ಮಕ ಸುಧಾರಣೆ, ಭೂ ದಾಖಲೆಗಳ ನಿರ್ವಹಣೆ ಮತ್ತು ಸಾರ್ವಜನಿಕ ಸೇವೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಪೋಡಿ, ದುರಸ್ತಿ,



ಪಹಣಿ ತಿದ್ದುಪಡಿ, ಮತ್ತು ಭೂ ಒತ್ತುವರಿ ತೆರವು ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಅಗತ್ಯ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪಿಂಚಣಿ ಯೋಜನೆಗಳು, ಆರ್‌ಟಿಸಿ ವಿತರಣೆ, ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ಕಾಲಮಿತಿಯೊಳಗೆ ಜನರಿಗೆ ತಲುಪಿಸಬೇಕು. ಸರ್ಕಾರದ ಬಾಕಿ ಬಿದ್ದಿರುವ ಕಂದಾಯ, ಮತ್ತು ಮರಳು ಗಣಿಗಾರಿಕೆಯ ಮೇಲಿನ ದಂಡಗಳನ್ನು ಸಮರ್ಪಕವಾಗಿ ವಸೂಲಿ ಮಾಡಬೇಕು. ಅಲ್ಲದೆ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಕೈಗೊಳ್ಳಬೇಕಾದ ತುರ್ತು ಪರಿಹಾರ ಕ್ರಮಗಳ ಕುರಿತು ಅಗತ್ಯ ಸಿದ್ಧತೆ ಕೈಗೊಳ್ಳಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು. ಕೆಳಮಟ್ಟದ ಕಂದಾಯ ಕಚೇರಿಗಳಾದ ನಾಡ ಕಚೇರಿಗಳು ಮತ್ತು ತಹಶೀಲ್ದಾರ್ ಕಚೇರಿಯಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಪಾರದರ್ಶಕ ಆಡಳಿತ ಸಂಬಂಧಿಸಿದ ಅಧಿಕಾರಿಗಳು ನೀಡಬೇಕು. ಹಾಗೂ ಸಾರ್ವಜನಿಕರಿಂದ ಸ್ವೀಕರಿಸಲ್ಪಟ್ಟ ಅರ್ಜಿಗಳ ಪ್ರಗತಿ ಪರಿಶೀಲನೆ ನಡೆಸಿ, ನಿಗದಿತ ಗಡುವಿನೊಳಗೆ ಕೆಲಸಗಳನ್ನು ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಯಚೂರು ವಿಭಾಗದ ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಲಿಂಗಸುಗೂರು ವಿಭಾಗದ ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಲಶೆಟ್ಟಿ, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮಾ, ಲಿಂಗಸುಗೂರು ತಹಶಿಲ್ದಾರ್ ಸತ್ಯಮ್ಮ, ದೇವದುರ್ಗ ತಹಶಿಲ್ದಾರ್ ನಾಗಮ್ಮ ಕಟ್ಟಿಮನಿ, ಸಿಂಧನೂರು ತಹಶಿಲ್ದಾರ್ ಅರುಣ್ ಕುಮಾರ್ ದೇಸಾಯಿ ಸೇರಿದಂತೆ ಜಿಲ್ಲಾಧಿಕಾರಿಗಳ ಕಚೇರಿಯ ಕಂದಾಯ ವಿಭಾಗದ ವಿವಿಧ ಅಧಿಕಾರಿಗಳು, ಸಿಬ್ಬಂದಿಗಳು ಸಭೆಯಲ್ಲಿ ಇದ್ದರು.

## ತಾಲೂಕ ಸಾರ್ವಜನಿಕ ಆಸ್ಪತ್ರೆಯಲ್ಲಿ ವಿಶ್ವ ರಕ್ತ ದೊತ್ತಡ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ವಿಶ್ವ ರಕ್ತದೊತ್ತಡ ದಿನಾಚರಣೆಯನ್ನು ತಾಲೂಕು ಸಾರ್ವಜನಿಕ ಆಸ್ಪತ್ರೆ ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ. ರುದ್ರಗೌಡ ಪಾಟೀಲ್ ಅವರ ಮಾರ್ಗದರ್ಶನದಲ್ಲಿ ವಿಶ್ವ ರಕ್ತದೊತ್ತಡ ದಿನಾಚರಣೆಯನ್ನು ಸಾರ್ವಜನಿಕರ ಜಾಗೃತಿಗಾಗಿ ಹಮ್ಮಿಕೊಂಡು ಮಾತನಾಡಿದ ಡಾ. ರುದ್ರಗೌಡ ಪಾಟೀಲ್ ರವರು ರೋಗ ಬರುವ ಮುನ್ನ ರಕ್ತ ದೂತ್ತಡ ತಡೆಗಟ್ಟುವುದು ಬಂದ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ ಉತ್ತಮ ರಕ್ತದೊತ್ತಡದಿಂದ ಆಗುವಂತ ಪರಿಣಾಮಗಳ ಬಗ್ಗೆ ಮಾಹಿತಿ ವಿವರಿಸಿದರು.**




ಜೊತೆಗೆ ಪತ್ತೆ ಹಚ್ಚುವಿಕೆ ಹಾಗೂ ಸೂಕ್ತ ಚಿಕಿತ್ಸೆಯಿಂದ ಆರೋಗ್ಯ ಕರ ಜೀವನ ನಡೆಸಲು ಸಾಧ್ಯವಿದೆ ಎಂದರು. ನಂತರ ಮಾತನಾಡಿದ ಡಾ . ಅಮೀನ್ ವಿಶ್ವ ರಕ್ತದೊತ್ತಡ ಕುರಿತಾಗಿ ಶಿಸ್ತು ಬದ್ಧವಾದ ಜೀವನಶೈಲಿ ಆಹಾರ ಪದ್ಧತಿಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಡಾ . ಶೋಭಾ ನಾಯಕ, ಡಾ .ಪ್ರಗತಿ, ಡಾ .ರುದ್ರಮುನಿ ಡಾ . ಶ್ರೀನಿಧಿ, ಆರೋಗ್ಯ ಶಿಕ್ಷಣಧಿಕಾರಿ ಪ್ರಾಣೇಶ, ಸಾಂಕ್ರಾಮಿಕ ವಿಭಾಗದ ಸಿಬ್ಬಂದಿ ಶಾಂತಮ್ಮ , ಚಂದ್ರಕಲಾ, ನೀಲಾಂಬಿಕ, ಅಮರೇಶ್ ಆಸ್ಪತ್ರೆ ಸಿಬ್ಬಂದಿ ರವಿ, ವೀರೇಶ, ರಂಗನಾಥ ಸೇರಿದಂತೆ ಇತರರು ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# LPG ಗ್ಯಾಸ್, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ? ಕೇಂದ್ರ ಸರ್ಕಾರ ವಿರುದ್ಧ ಆಕ್ರೋಶ :ಭೀಮಣ್ಣ ವಿರಗೂಟ ಹೇಳಿಕೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕ ಸಮಿತಿ ಸದಸ್ಯರಾದ ಭೀಮಣ್ಣ ವಿರಗೂಟ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ ಕೇಂದ್ರ ಸರ್ಕಾರದ ನಿರಂತರ ಬೆಲೆ ಏರಿಕೆ ನೀತಿಯನ್ನು ತೀವ್ರವಾಗಿ ಖಂಡಿಸಿದರು.**

ಗೃಹ ಬಳಕೆಯ ಐಕಲು ಸಿಲಿಂಡರ್ ಬೆಲೆ ಮತ್ತೆ ಏರಿಕೆಯಾಗಿರುವುದು ಹಾಗೂ ಪೆಟ್ರೋಲ್ ಮತ್ತು ಡೀಸೆಲ್ ದರಗಳ ಏರಿಕೆಯಿಂದ ಸಾಮಾನ್ಯ ಜನರು, ವಿಶೇಷವಾಗಿ ಬಡವರು ಮತ್ತು ಮಧ್ಯಮ ವರ್ಗದ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ ಎಂದು ಅವರು ಹೇಳಿದರು. ಬೆಲೆ ಏರಿಕೆಯ ಪರಿಣಾಮ ಮಹಿಳೆಯರ



ದಿನನಿತ್ಯದ ಜೀವನ ಹಾಗೂ ಕುಟುಂಬದ ಆರ್ಥಿಕ ಸ್ಥಿತಿಯ ಮೇಲೆ ನೇರ ಪರಿಣಾಮ ಬೀರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. “ಜನರ ಜೀವನ ಸುಧಾರಿಸಲು ಆಯ್ಕೆಯಾದ ಸರ್ಕಾರವೇ ಜನರ ಮೇಲೆಯೇ ಹೆಚ್ಚುವರಿ ಭಾರ ಹಾಕುತ್ತಿರುವುದು ವಿಷಾದನೀಯ,” ಎಂದು ಅವರು ಹೇಳಿದರು. ಕೇಂದ್ರ ಸರ್ಕಾರಕ್ಕೆ ಪ್ರಮುಖ ಆಗ್ರಹಗಳು: LPG ಗ್ಯಾಸಿನ ಬೆಲೆಯನ್ನು ತಕ್ಷಣ ಕಡಿತಗೊಳಿಸಬೇಕು ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಸಬ್ಸಿಡಿ ಮರುಸ್ಥಾಪಿಸಬೇಕು ಮಹಿಳಾ ಪ್ರಧಾನ ಕುಟುಂಬಗಳಿಗೆ ವಿಶೇಷ ಆರ್ಥಿಕ ಸಹಾಯ ಘೋಷಿಸಬೇಕು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಕೂಡಲೇ ಇಳಿಸಬೇಕು ಜನರ ಸಂಕಷ್ಟ ನಿವಾರಣೆಗೆ ಕೇಂದ್ರ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

# ಮೇ.20ರಂದು ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 33/11 ಕೆವಿ ಕಲ್ಮಲಾ ವಿದ್ಯುತ್ ಉಪ-ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮೇ.20ರ**




**ಬೆಳಿಗ್ಗೆ 08 ಗಂಟೆಯಿಂದ ಸಾಯಂಕಾಲ 05 ಗಂಟೆವರೆಗೆ ಕಲ್ಮಲಾ ಉಪ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.**

ಅಂದು ಬೆಳಿಗ್ಗೆ 8ರಿಂದ ಕಲ್ಮಲಾ, ಮುರಾಂಪುರ, ಸುಲ್ತಾನಪುರ, ಜಾಗೀರವೆಂಕಟಪುರ, ಮಂಚ್ಲಾಪುರ, ಜೇಗರಕಲ್, ರಘುನಾಥನಹಳ್ಳಿ, ವಿಜಯನಗರ ಕ್ಯಾಪ್, ಮಾರೆಮ್ಮಕ್ಯಾಪ್, ಹುಣಿಸಿಹಾಳಹುಡ, ಕಸ್ಬೆಕ್ಯಾಂಪ್, ಸೀತಾನಗರ ನಗರ ಕ್ಯಾಂಪ್, ಹೊಸ್ಪೇಟ, ಮರ್ಚೆಡ್, ಗೋನಾಳ, ಪತ್ತೇಪುರ, 7 ಮೇಲ್ ಇಂಡಸ್ಟ್ರಿಯಲ್ ಏರಿಯಾ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾಜಿ ಪ್ರಧಾನಿ ಹೆಚ್.ಡಿ.ದೇವೆಗೌಡರ ಜನ್ಮದಿನ ಅಂಗವಾಗಿ ರೋಗಿಗಳಿಗೆ ಹಣ್ಣುಗಳ ವಿತರಣೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದಲ್ಲಿ ಜಾತ್ಯತೀತ ಜನತಾದಳ ತಾಲೂಕು ಘಟಕವತಿಯಿಂದ ಸಾರ್ವಜನಿಕ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಹಾಲು ಹಣ್ಣು ವಿತರಿಸುವ ಮೂಲಕ ಮಾಜಿ ಪ್ರಧಾನಿ ಹೆಚ್.ಡಿ.ದೇವೆಗೌಡರ ಜನ್ಮದಿನವನ್ನು ಸರಳವಾಗಿ ಆಚರಿಸಿ ಜೆಡಿಎಸ್ ಯುವ ಘಟಕದ ರಾಜ್ಯ ಉಪಾಧ್ಯಕ್ಷರಾದ ರಾಜಾ ರಾಮಚಂದ್ರ ನಾಯಕ ಮಾತನಾಡಿ ಹೆಚ್.ಡಿ.ದೇವೆಗೌಡರು ದೇಶದ ಪ್ರಧಾನಿಯಾಗಿ, ರಾಜ್ಯದ ಮುಖ್ಯಮಂತ್ರಿಯಾಗಿ,**

ತ್ತಮವಾದ ಅಭಿವೃದ್ಧಿ ಕಾರ್ಯಗಳನ್ನು



ಮಾಡಿದ್ದಾರೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಲವು ನೀರಾವರಿ ಯೋಜನೆಗಳನ್ನು ಜಾರಿ ಕೃಷ್ಣಾ ಭಾಗ್ಯ ಜಲ ನಿಗಮದ ಮೂಲಕ ಮಾಡುವ ಮೂಲಕ ಈ ಭಾಗದ ಅಭಿವೃದ್ದಿಗೆ ಕಾರಣರಾಗಿದ್ದಾರೆ ಎಂದು ತಿಳಿಸಿದರು. ಮಾನ್ವಿ ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿನ ಒಳರೋಗಿಗಳಿಗೆ ಹಣ್ಣುಗಳನ್ನು ವಿತರಿಸಲಾಯಿತು.

ಜೆಡಿಎಸ್ ಪಕ್ಷದ ಮುಖಂಡರಾದ ಪಿ. ರವಿಕುಮಾರ್ ವಕೀಲರು, ಯಲ್ಲಪ್ಪ ನಾಯಕ ಮುಸ್ಟೂರು ವಕೀಲರು, ಶರಣಪ್ಪ ಗೌಡ ಮದ್ಲಾಪುರ, ಶೌಕತ್ ಅಲಿ, ಬಾಷಾ ಸಾಬ್, ಶರಣಪ್ಪ ಮೇದ, ಸುಭಾನ್ ಬೇಗ್, ಬಸವರಾಜ ಸ್ವಾಮಿ, ವಿಜಯ್ ನಾಯಕ, ಕೆ. ಸಾಜಿದ್ ಪಾಷಾ, ಮ್ಯಾಕಲ್ ಮೌನೇಶ್ ನಾಯಕ, ಯಲ್ಲಪ್ಪ ನಾಯಕ, ಶಿವರಾಮ್ ರೆಡ್ಡಿ ಹೊಸೂರು, ಸಂಪತ್ ಕುಮಾರ್, ವೀರೇಶ್ ವಿಶ್ವಕರ್ಮ ಸೇರಿದಂತೆ ಇನ್ನಿತರರು ಇದ್ದರು.

# ಕರುನಾಡಿನ ಕರ್ಣ ದೇವೇಗೌಡರು ಸಿಂಧನೂರಿನ ಸಿಂಧೂರ ನಮ್ಮ ನಾಡಗೌಡರು :ರವಿಗೌಡ ಪನ್ನೂರು

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಾತ್ಯಾತೀತ ಜನತಾದಳ ಸಿಂಧನೂರು ಹಾಗೂ ವೆಂಕಟರಾವ್ ನಾಡಗೌಡ ಅಭಿಮಾನಿ ಬಳಗದ ವತಿಯಿಂದ ಮಾಜಿ ಪ್ರಧಾನಿಗಳಾದ ಎಚ್.ಡಿ. ದೇವೇಗೌಡ ಅವರ 93ನೇ ವರ್ಷದ ಜನ್ಮದಿನ ಸಮಾರಂಭ ಕಾರ್ಯಕ್ರಮವನ್ನು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಆಶ್ರಯದಾತರುಗಳಿಗೆ ಹೊಸ ವಸ್ತ್ರಗಳನ್ನು ಮತ್ತು ಮಹಾಪ್ರಸಾದ ಸೇವೆ ಹಣ್ಣು ಹಂಪೆಗಳನ್ನು ವಿತರಿಸುವ ಮೂಲಕ ಸರಳವಾಗಿ ಅರ್ಥಪೂರ್ಣವಾಗಿ ಆಚರಿಸಲಾಯಿತು.**

ಈ ಕಾರ್ಯಕ್ರಮದಲ್ಲಿ ಜೆ.ಡಿ.ಎಸ್. ನಗರ ಘಟಕ ಅಧ್ಯಕ್ಷರಾದ ರವಿ ಗೌಡ ಪನ್ನೂರು ಹಾಗೂ ಜೆ.ಡಿ.ಎಸ್. ಮುಖಂಡರಾದ ವೆಂಕಟೇಶ ನಂಜಲದಿನ್ನಿ ಇವರುಗಳಿಗೆ ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜೆ.ಡಿ.ಎಸ್. ಯುವ ಮುಖಂಡರಾದ ಅಭಿಷೇಕ್ ನಾಡಗೌಡ ಮಾತನಾಡಿ ನಮ್ಮ ಪ್ರಧಾನಿಗಳಾದ ಜಗತ್ತು ಕಂಡ ಶ್ರೇಷ್ಠ ಪ್ರಧಾನಿಗಳಾದ ದೇವೇಗೌಡರ ಈ ಜನ್ಮದಿನ ಸಮಾರಂಭ ನಮ್ಮ ಪಕ್ಷದಿಂದ ಕಾರುಣ್ಯ ಆಶ್ರಮದಲ್ಲಿ ಹಮ್ಮಿಕೊಂಡಿರುವುದು ಅರ್ಥಪೂರ್ಣ ಕಾರ್ಯಕ್ರಮವಾಗಿದೆ. ನಮ್ಮ ಮಾಜಿ ಪ್ರಧಾನಿಗಳಾದ ದೇವೇಗೌಡರ ಕೊಡುಗೆ ನಮ್ಮ ರಾಜ್ಯಕ್ಕೆ ಅಪಾರವಾಗಿದೆ. ಅವರು ಪ್ರಧಾನಿಗಳಾದಂತಹ ಸಂದರ್ಭದಲ್ಲಿ ಹಲವಾರು ನೀರಾವರಿ




ಯೋಜನೆಗಳನ್ನು ಮತ್ತು ಜನಪರ ಯೋಜನೆಗಳನ್ನು ಮನೆಮನೆಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದರು.

ಜನರಿಗಾಗಿ ಜನರಿಗೋಸ್ಕರ ಹುಟ್ಟಿದವರೇ ನಮ್ಮ ದೇವೇಗೌಡರು ಅವರ ಒಂದು ಮಾರ್ಗದರ್ಶನ ಆದರ್ಶ ವ್ಯಕ್ತಿತ್ವವನ್ನು ನಮ್ಮ ನಾಯಕರಾದ ವೆಂಕಟರಾವ್ ನಾಡಗೌಡ ಅವರು ಮೈಗೂಡಿಸಿಕೊಂಡು ನಮ್ಮ ಕ್ಷೇತ್ರದ ಜನತೆಗೆ ಮಗನಾಗಿ ಮೊಮ್ಮಗನಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನಾವೆಲ್ಲರೂ ಕೂಡ ಇಂದು ದೇವೇಗೌಡರಿಗೆ ಶುಭ ಹಾರೈಸುವ ಮೂಲಕ ಅವರ ಜನಪರ ಚಿಂತನೆಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳೋಣ ಎಂದು ಮಾತನಾಡಿ ಶುಭ ಹಾರೈಸಿದರು. ನಂತರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಜೆ.ಡಿ.ಎಸ್.ನಗರ ಘಟಕ ಅಧ್ಯಕ್ಷರಾದ ರವಿಗೌಡ ಪನ್ನೂರು ಮಾತನಾಡಿ ನಮ್ಮ ಕರುನಾಡಿನ ಕರ್ಣ ದೇವೇಗೌಡರು ಸಿಂಧನೂರಿನ ಸಿಂಧೂರ ನಮ್ಮ ನಾಡಗೌಡರು ಇವರುಗಳ ಸಮಾಜದ ಚಿಂತನೆಗಳು ಅವರ ಆದರ್ಶಗಳನ್ನು ಪ್ರತಿಯೊಬ್ಬರು ಇಷ್ಟಪಡುತ್ತಿದ್ದಾರೆ.

ನವಲಿ ಜಲಾಶಯದ ಹಾಗೂ ತುಂಗಭದ್ರಾ ಜಲಾಶಯಗಳ ಬಗ್ಗೆ ನಿರಂತರ ತಿಳಿದುಕೊಳ್ಳುವ ಮೂಲಕ ಪರಿಹಾರವನ್ನು ಕಂಡುಕೊಳ್ಳುವ ಕಾರ್ಯವನ್ನು 93ನೇ ವಯಸ್ಸಿನಲ್ಲಿ ನಮ್ಮ ದೇವೇಗೌಡರು ಮಾಡುತ್ತಿರುವುದು ನಮ್ಮೆಲ್ಲರಿಗೆ ಹೆಮ್ಮೆ 1975ರಲ್ಲಿ ಇಂದಿರಾ ಗಾಂಧಿಯವರು ಎಮರ್ಜೆನ್ಸಿ ಘೋಷಣೆ ಮಾಡಿದಂತಹ ಸಂದರ್ಭದಲ್ಲಿ ಅದರ ವಿರುದ್ಧ ಹೋರಾಡಿ 18 ತಿಂಗಳು ಜೈಲಿನಲ್ಲಿ ಕಾಲ ಕಳೆಯುವುದರ ಮೂಲಕ ಸರ್ಕಾರಕ್ಕೆ ಅರಿವು ಮೂಡಿಸಿದ್ದರು. ಇವರುಗಳ




ಆದರ್ಶವೇ ನಮ್ಮೆಲ್ಲರಿಗೆ ಸ್ಫೂರ್ತಿಯಾಗಿದೆ ಎಂದು ಮಾತನಾಡಿದರು. ನಂತರ ಜೆ.ಡಿ.ಎಸ್. ವೆಂಕಟೇಶ ನಂಜಲದಿನ್ನಿ ಮಾತನಾಡಿ ನಮ್ಮ ಮಾಜಿ ಪ್ರಧಾನಿಗಳಾದ ದೇವೇಗೌಡರು 93ನೇ ವಯಸ್ಸಿನಲ್ಲೂ ಕೂಡ ನಮ್ಮ ದೇಶದ ಬಗ್ಗೆ ರಾಜ್ಯದ ಬಗ್ಗೆ ಮತ್ತು ರೈತರ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿ ಈಗಲೂ ಕೂಡ ಹೋರಾಟ ನಡೆಸುತ್ತಿದ್ದಾರೆ.

ಯುವಕರಾದ ನಾವು ಬರೀ ಮಾತನಾಡುತ್ತಿದ್ದೇವೆ. ಆದರೆ ಅವರ ನಿರಂತರ ಸಾಮಾಜಿಕ ಚಿಂತನೆಗಳು ಸಾಮಾಜಿಕ ಬದುಕನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು. ನಮ್ಮ ರಾಜ್ಯಕ್ಕೆ ನೀರಾವರಿ ತಂದುಕೊಡುವಲ್ಲಿ ಅವರ ಪ್ರಾಮಾಣಿಕ ಪ್ರಯತ್ನವೇ ನಮ್ಮ ರಾಜ್ಯದ ರೈತರ ಬಾಳಿಗೆ ಬೆಳಕಾಗಿದೆ. ಈಗಿನ ಮುಖ್ಯಮಂತ್ರಿಗಳು ಸಹ ದೇವೇಗೌಡರ ಗರಡಿಯಲ್ಲಿ ಬೆಳೆದಿರುವುದು ಇಡೀ ದೇಶಕ್ಕೆ ಗೊತ್ತಿದೆ ಅವರು ಹಲವಾರು ರಾಜಕಾರಣಿಗಳನ್ನು ದೃಷ್ಟಿ ಮಾಡುವ ಕಾರ್ಖಾನೆಯಾಗಿದ್ದಾರೆ. ಅವರಿಗೆ ಕಾರುಣ್ಯ ಆಶ್ರಮದ ಕೂಸುಗಳ ಆಶೀರ್ವಾದ ಸಕಲ ದೇವಾನುದೇವತೆಗಳ ಆಶೀರ್ವಾದದೊಂದಿಗೆ ಶತಾಯುಷಿಗಳಾಗಿ ನಮ್ಮೆಲ್ಲರಿಗೆ ಸ್ಫೂರ್ತಿಯಾಗಲಿ ಎಂದು ನಾವೆಲ್ಲರೂ ಹಾರೈಸುತ್ತಿದ್ದೇವೆ ಎಂದು ಮಾತನಾಡಿ ಶುಭ ಹಾರೈಸಿದರು. ಈ ಕಾರ್ಯಕ್ರಮದಲ್ಲಿ ವೇ. ಮೂ. ವೀರೇಶ ಯಡಿಯೂರುಮಠ ಶ್ರೀ ಶಾಂಭವಿ ಪುಣ್ಯಾಶ್ರಮ ಸಿಂಧನೂರು ದಿವ್ಯ ಸಾನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಿವಯ್ಯ ಸಿಂಧನೂರು. ಕೇದಾರನಾಥ ಸಾಹುಕಾರ ವಕೀಲರು ಸಂಘಟನಾ ಕಾರ್ಯದರ್ಶಿಗಳು ಮಾನ್ವಿ ವಿಧಾನಸಭಾ ಕ್ಷೇತ್ರ. ವೆಂಕಟೇಶ ನಂಜಲದಿನ್ನಿ. ಆಂಜನೇಯ ರಾಗಲಪರ್ವಿ ಗುತ್ತೇದಾರರು. ಸುಮಿತ್ ತಡಕಲ್ ಯುವ ಮುಖಂಡರು ಸಿಂಧನೂರು. ಅಜಯ್ ದಾಸರಿ ಯುವ ಮುಖಂಡರು ಸಿಂಧನೂರು. ಮಲ್ಲಯ್ಯ ಸ್ವಾಮಿ ನವಲಿ. ಎಸ್. ಬಿ. ರಡ್ಡಿ. ಗುಂಡಪ್ಪ ಉದ್ಯಮಿಗಳು. ವೆಂಕನಗೌಡ ಕಲ್ಲೂರು. ಶಂಕರಗೌಡ ಎಲೆಕೂಡ್ಲಿಗಿ. ನಿರುಪಾದಿ ಪುಲದಿನ್ನಿ. ವೀರೇಶ ಕೋರಿ ಉದ್ಬಾಳ ಇ. ಜೆ. ಬಸವರಾಜ ಮಲ್ಲಾಪುರ. ಬುಡಾನ್ ಸಾಬ್. ಪ್ರದೀಪ್ ಪೂಜಾರಿ. ಮಾಳಪ್ಪ ಮಾಡಗಿರಿ. ಪಂಪಣ್ಣ ಯಾದವ್. ಆಶಿಫ್. ಬಾಬಾ ಜವಳಗೇರಾ. ವೀರ ಬಾಬು ಮುಸ್ತಫಾ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಶ್ರೀ ಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ.ಸಿದ್ದಯ್ಯ ಸ್ವಾಮಿ.ಮರಿಯಪ್ಪ. ಜ್ಯೋತಿ.ಮೀನಾಕ್ಷಮ್ಮ.ಲಕ್ಷ್ಮಿ. ಬಸವ ಸ್ವಾಮಿ.ಶರಣು ಸ್ವಾಮಿ. ಹಾಗೂ ಸಿಂಧನೂರಿನ ಜೆಡಿಎಸ್ ಪಕ್ಷದ ಹಲವಾರು ಕಾರ್ಯಕರ್ತರು ಮತ್ತು ವೆಂಕಟರಾವ್ ನಾಡಗೌಡ ಅಭಿಮಾನಿಗಳು ಉಪಸ್ಥಿತರಿದ್ದರು

## ನೇಮಕಾತಿ ಪ್ರಕಟಣೆ

ನಬಾರ್ಡ್ ಕನ್ಸಲ್ಟೆನ್ಸಿ ಸರ್ವೀಸಸ್ (NABCONS) ನಲ್ಲಿ ಯೋಜನಾ ಆಧಾರಿತ ಗುತ್ತಿಗೆ ಸಿಬ್ಬಂದಿಯ 13 ಹುದ್ದೆಗಳಿಗೆ ನೇಮಕಾತಿ 2026. MBA, B.E/B.Tech, CA/ ICWA, B.Sc, BVSc, M.Tech/MCA ಹೊಂದಿರುವ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 18–05–2026. ಅಭ್ಯರ್ಥಿಯು NABCONS ಅಧಿಕೃತ ವೆಬ್‌ಸೈಟ್ nabcons.com ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.ಕೊನೆಯ ದಿನಾಂಕ 18 ಮೇ 2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ವಿಧಾನ

## ಠಾಣೆಯಲ್ಲಿನ ದೌರ್ಜನ್ಯ ತಡೆಗೆ ಕಟ್ಟುನಿಟ್ಟಿನ ಆದೇಶ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಪೊಲೀಸ್ ವಶದಲ್ಲಿದ್ದಾಗ ಸಂಭವಿಸುವ ಸಾವುಗಳ ವಿಚಾರಣೆ ಹಾಗೂ ಅದಕ್ಕೆ ಸಂಬಂಧಿಸಿದಂತಹ ಪ್ರಕ್ರಿಯೆಗಳ ಕುರಿತು ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಪ್ರಮಾಣಿತ ಕಾರ್ಯವಿಧಾನ ಸ್ಥಾಯಿ ಆದೇಶ ಹೊರಡಿಸಿದ್ದಾರೆ. ಬಂಧನದಲ್ಲಿನ ಹಿಂಸೆ ಹಾಗೂ ಬಂಧನದಲ್ಲಿನ ಸಾವು ಸೇರಿದಂತೆ ಪ್ರತ್ಯೇಕ ಸಂದರ್ಭದಲ್ಲಿ ಸ್ಥಳೀಯ ಅಧಿಕಾರಿಗಳು ಮತ್ತು ಸಿಐಡಿ ತನಿಖಾಧಿಕಾರಿಗಳು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ಮಾರ್ಗ ಸೂಚಿಗಳನ್ನು ಎಲ್ಲಾ ಪೊಲೀಸ್ ಆಯುಕ್ತರಿಗೆ, ವಿಭಾಗವಾರು ಐಜಿಗಳು, ಡಿಐಜಿಗಳು ಹಾಗೂ ಎಸ್ಪಿಗಳಿಗೆ ರವಾನಿಸಲಾಗಿದೆ.**

ಬಂಧನದಲ್ಲಿನ ಹಿಂಸೆ ಅಥವಾ ಸಾವಿನ ಪ್ರಕರಣಗಳಲ್ಲಿ ಏಕರೂಪವಾದ ತನಿಖಾ ವಿಧಾನ ಅನುಸರಿಸುತ್ತಿಲ್ಲ. ಎಫ್‌ಐಆರ್ ದಾಖಲಿಸಲು ವಿಳಂಬವಾಗುತ್ತಿದೆ. ಪ್ರಮುಖ ಭೌತಿಕ ಹಾಗೂ ಡಿಜಿಟಲ್



ಸಾಕ್ಷ್ಯ ಸಂಗ್ರಹಣೆಯಲ್ಲಿ ಲೋಪಗಳು ಕಂಡು ಬರುತ್ತಿವೆ ಎಂದು ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಮ್ ತಿಳಿಸಿದ್ದಾರೆ. ಸಿಐಡಿ ಅಧಿಕಾರಿಗಳು ತನಿಖೆ ವಹಿಸಿಕೊಳ್ಳುವ ವೇಳೆಗೆ ತಾಂತ್ರಿಕ ಲೋಪಗಳು ಉಂಟಾಗಿ ಪ್ರಮುಖ ಸಾಕ್ಷ್ಯಗಳು ಹಾಳಾಗುವ ಸಾಧ್ಯತೆ ಇದೆ. ಇದು ತನಿಖೆಯ ಗುಣಮಟ್ಟ ಹಾಗೂ ನ್ಯಾಯಾಂಗ ಪ್ರಕ್ರಿಯೆಗೆ ಹಾನಿಯುಂಟು ಮಾಡಲಿದೆ. ಇನ್ನು ಮುಂದೆ ಎಲ್ಲಾ ಪೊಲೀಸ್ ಅಧಿಕಾರಿಗಳು ಪ್ರಮಾಣಿತ ಕಾರ್ಯವಿಧಾನ (ಎಸ್‌ಒಪಿ) ಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಆದೇಶಿಸಿದ್ದಾರೆ. ಘಟನೆ ನಡೆದ ತಕ್ಷಣವೇ ಠಾಣಾಧಿಕಾರಿ ಪೀಡಿತನ, ಪೀಡಿತ ವ್ಯಕ್ತಿಯ ಬಂಧುಗಳು ಅಥವಾ ಇತರೆ ವ್ಯಕ್ತಿಗಳ ದೂರಿನ ಆಧಾರದ ಮೇಲೆ ಅಥವಾ ಸ್ವಯಂ ಪ್ರೇರಿತವಾಗಿ ವಿಳಂಬವಿಲ್ಲದಂತೆ ಪ್ರಕರಣ ದಾಖಲಿಸಬೇಕು. ತಕ್ಷಣವೇ ಎಫ್‌ಐಆರ್ ಪ್ರತಿಯೊಂದಿಗೆ ತುರ್ತು ವರದಿಯನ್ನು ಘಟಕದ ಮುಖ್ಯಸ್ಥರಿಗೆ ಹಾಗೂ ಮುಖ್ಯ ಕಚೇರಿಗೆ ಸರಿಯಾದ ಮಾರ್ಗದಲ್ಲಿ ಕಳುಹಿಸಬೇಕು ಎಂದು ಸೂಚಿಸಲಾಗಿದೆ. ಸಿಐಡಿ ಹಸ್ತಾಂತರಿಸುವವರೆಗೂ ಘಟಕದ ಹಿರಿಯ ಅಧಿಕಾರಿಯಿಂದ ನಿಷ್ಪಕ್ಷಪಾತ ತನಿಖೆ ನಡೆಯುವಂತೆ ನೋಡಿಕೊಳ್ಳಬೇಕು. ಭಾರತೀಯ ನಾಗರಿಕಾ ಸುರಕ್ಷಾ ಸಂಹಿತೆ ಪ್ರಕಾರ ಡಿವೈಎಸ್ಪಿ ಅಥವಾ ಅದಕ್ಕಿಂತ ಮೇಲಿನ ಹುದ್ದೆಯ ಅಧಿಕಾರಿಯನ್ನು ತನಿಖಾಧಿಕಾರಿಯನ್ನಾಗಿ ನೇಮಿಸಬೇಕೆಂದು ಸೂಚಿಸಲಾಗಿದೆ. ಬಂಧನದಲ್ಲಿನ ಹಿಂಸೆ ಪ್ರಕರಣದಲ್ಲಿ ಸ್ಥಳೀಯ ಅಧಿಕಾರಿಗಳು ತಕ್ಷಣವೇ ಸ್ಥಳ ಮಹಜರು ನಡೆಸಬೇಕು. ಭೌತಿಕ ಹಾಗೂ ಪರಿಸ್ಥಿತಿ ಜನ್ಯ ಸಾಕ್ಷ್ಯಗಳನ್ನು ಆಡಿಯೋ, ವಿಡಿಯೋ ಮಾದರಿಯಲ್ಲಿ ಸಂಗ್ರಹಿಸಬೇಕು. ಠಾಣೆಯ ಸಿಸಿಟಿವಿ ದೃಶ್ಯಾವಳಿಗಳನ್ನು ಕಾನೂನು ಬದ್ಧವಾಗಿ ವಶಪಡಿಸಿಕೊಳ್ಳಬೇಕು. ಪೀಡಿತರ ಹೇಳಿಕೆಯನ್ನು ದಾಖಲಿಸಬೇಕು ಮತ್ತು ವೈದ್ಯಕೀಯ ಪರೀಕ್ಷಾ ವರದಿಗಳನ್ನು ಸಂಗ್ರಹಿಸಬೇಕು. ಸಿಐಡಿ ತನಿಖೆ ಆರಂಭಿಸುವವರೆಗೂ ತನಿಖೆ ಮುಂದುವರಿಸಬೇಕೆಂದು ಸೂಚಿಸಲಾಗಿದೆ. ಸಿಐಡಿ ಅಧಿಕಾರಿಗಳು ತನಿಖೆ ಆರಂಭಿಸಿದ ಬಳಿಕ ಹಿಂದಿನ ತನಿಖಾಧಿಕಾರಿಯೂ ಒದಗಿಸಿದ ದಾಖಲಾತಿಗಳು ಹಾಗೂ ಪ್ರಕರಣ ದಿನಚರಿಗಳನ್ನು ಪರಿಶೀಲಿಸಬೇಕು. ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಹಜರು ಮತ್ತು ಭೌತಿಕ ಸಾಕ್ಷ್ಯಗಳನ್ನು ಖಚಿತಪಡಿಸಿಕೊಳ್ಳಬೇಕು. ಸಾಕ್ಷಿದಾರರ ಹೇಳಿಕೆಗಳನ್ನು ಮರು ಪರೀಕ್ಷಿಸಬೇಕು. ನೇರ, ಪರೋಕ್ಷದಾರರ ಹೇಳಿಕೆಗಳನ್ನು ದಾಖಲಿಸಬೇಕು. ಸಿಸಿಟಿವಿ ದೃಶ್ಯಾವಳಿ ಡಿವಿಆರ್, ಎನ್‌ವಿಆರ್, ಸಿಡಿಆರ್, ಎಫ್‌ಐಆರ್ ಹಾಗೂ ಇತರ ದಾಖಲಾತಿಗಳನ್ನು ವಶಪಡಿಸಿಕೊಳ್ಳಬೇಕು. ವೈದ್ಯರು ಹಾಗೂ ತಜ್ಞರಿಂದ ಅಭಿಪ್ರಾಯ ಪಡೆಯಬೇಕು. ಕಾಲಮಿತಿಯಲ್ಲಿ ತನಿಖೆ ಪೂರ್ಣಗೊಳಿಸ ಬೇಕು. ಪೊಲೀಸ್ ಅಧಿಕಾರಿಗಳ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಬೇಕಿದ್ದರೆ ಅಗತ್ಯ ಪೂರ್ವಾನುಮತಿ ಪಡೆಯಬೇಕೆಂದು ತಿಳಿಸಲಾಗಿದೆ. ಸಾವು ಸಂಭವಿಸಿದ ಸಂದರ್ಭದಲ್ಲಿ ಮ್ಯಾಜಿಸ್ಟ್ರೇಟ್ ಅವರಿಗೆ ಮರಣೋತ್ತರ ತನಿಖೆ ನಡೆಸಲು ಮನವಿ ಸಲ್ಲಿಸಿ, ಅಗತ್ಯ ಸೌಲಭ್ಯಗಳನ್ನು ಸ್ಥಳೀಯ ಅಧಿಕಾರಿಗಳು ಕಲ್ಪಿಸಬೇಕು. ಮರಣೋತ್ತರ ಪರೀಕ್ಷೆಯನ್ನು ಸಂಪೂರ್ಣ ವಿಡಿಯೋಗ್ರಫಿ ಮಾಡಿಸಬೇಕು. ಫೊರೆನ್ಸಿಕ್ ತಜ್ಞರನ್ನು ಸ್ಥಳಕ್ಕೆ ಕರೆಸಿ ಸಾಕ್ಷ್ಯ ಸಂಗ್ರಹಿಸಬೇಕು. ಎಫ್‌ಎಸ್‌ಎಲ್ ಮತ್ತು ಸೋಕೊ ಅಧಿಕಾರಿಗಳಿಗೆ ಸಾಕ್ಷ್ಯ ಸಂಗ್ರಹಿಸಲು ಅವಕಾಶ ಕಲ್ಪಿಸಬೇಕು. ಭೌತಿಕ, ಜೈವಿಕ, ಪರಿಸ್ಥಿತಿ ಜನ್ಯ, ಸಾಕ್ಷ್ಯಗಳು, ಸಿಸಿಟಿವಿ ದೃಶ್ಯಾವಳಿಗಳು ಮೃತರ ಬಂಧುಗಳ ಹೇಳಿಕೆ ದಾಖಲಿಸುವ ಜೊತೆಗೆ ಸಂಗ್ರಹಿಸಿದ ಮಾದರಿಗಳನ್ನು ಎರಡು ದಿನದೊಳಗೆ ಎಫ್‌ಎಸ್‌ಎಲ್‌ಗೆ ಕಳುಹಿಸಬೇಕು. ಸಿಐಡಿ ತನಿಖೆ ಆರಂಭಿಸುವವರೆಗೂ ವಿಚಾರಣೆ ಮುಂದುವರೆಸಬೇಕೆಂದು ಸೂಚಿಸಲಾಗಿದೆ. ಸಿಐಡಿ ಅಧಿಕಾರಿಗಳು ಹಿಂದಿನ ತನಿಖಾ ದಾಖಲೆಗಳನ್ನು ಪರಿಶೀಲಿಸಿ ಆರೋಪಿ ಅಧಿಕಾರಿಗಳ ಮತ್ತು ಸಾಕ್ಷಿದಾರರ ನೆರವಿನಿಂದ ಘಟನೆಯನ್ನು ಪುನರ್ ಪ್ರತಿ ಸೃಷ್ಟಿಸಬೇಕು.

## ಬುಡಕಟ್ಟು ಸಮುದಾಯವನ್ನು ಮುಖ್ಯ ವಾಹಿನಿಗೆ ತರುವ ಕಾರ್ಯವಾಗಲಿ: ಎಡಿಸಿ ಶಿವಾನಂದ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸರ್ಕಾರದ ಯೋಜನೆಗಳನ್ನು ಬುಡಕಟ್ಟು ಸಮುದಾಯದ ಅರ್ಹ ಫಲಾನುಭವಿಗಳ ಮನೆ ಮನೆಗೆ ತಲುಪಿಸುವ ಮೂಲಕ ಅವರನ್ನು ಆರ್ಥಿಕ ಹಾಗೂ ಸಾಮಾಜಿಕವಾಗಿ ಮುಖ್ಯ ವಾಹಿನಿಗೆ ತರುವ ಕಾರ್ಯ ಆಗಬೇಕೆಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.**

ಮೇ.18ರ ಸೋಮವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ರಾಯಚೂರು ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಧರ್ತಿ ಆಭಾ ಜನಜಾತೀಯ ಗ್ರಾಮ ಉತ್ಕರ್ಷ ಅಭಿಯಾನ ಕಾರ್ಯಕ್ರಮದಡಿ ಜನ್ ಭಾಗೀದಾರ ಸಬ್ಸೆ ದೂರ, ಸಬ್ಸೆ ಪೆಹ್ಲೆ ಅಭಿಯಾನ ಸಭೆಯಲ್ಲಿ




ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅಭಿಯಾನದಲ್ಲಿ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಆಯುಷ್ಮಾನ್ ಭಾರತ ಕಾರ್ಡ್ , ಜಾತಿ ಪ್ರಮಾಣ ಪತ್ರ, ಪಿಎಂ ಕಿಸಾನ್ ಕ್ರೆಡಿಟ್ ಕಾರ್ಡ್, ಜನಧನ್ ಬ್ಯಾಂಕ್ ಖಾತೆ, ಸಾಮಾಜಿಕ ಭದ್ರತಾ ಯೋಜನೆಗಳಾದ ವೃದ್ಧಾಪ್ಯ ಪಿಂಚಣಿ, ವಿಧವಾ ಪಿಂಚಣಿ, ದಿವ್ಯಾಂಗ ಪಿಂಚಣಿ ಹಾಗೂ ಉದ್ಯೋಗ ಮತ್ತು ಜೀವನೋಪಾಯ ಯೋಜನೆಗಳಾದ ಪಿಎಂ ವಿಶ್ವಕರ್ಮ, ಮುದ್ರಾ ಸಾಲಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡದರು. ಗ್ರಾಮ ಮಟ್ಟದಲ್ಲಿ ಫಲಾನುಭವಿಗಳಿಗೆ ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮಗಳನ್ನು ಆಯೋಜಿಸುವುದು. ಆದಿಕರ್ಮಯೋಗಿ ಹಾಗೂ ಎನ್.ಜಿ.ಓ.ಗಳ ಮೂಲಕ ಗ್ರಾಮಗಳಲ್ಲಿ ಟ್ರಾನ್ಸೆಕ್ಸ್ ವಾಕ್ ನಡೆಸಬೇಕು.

ಅವರ ಅಹವಾಲು ಸ್ವೀಕಾರ ಹಾಗೂ ತ್ವರಿತವಾಗಿ ಪರಿಹಾರ ಕೈಗೊಳ್ಳಬೇಕು. ಈ ಕುರಿತು ಪ್ರಗತಿ ವರದಿ ಸಿದ್ಧಪಡಿಸಿ, ಅದರಂತೆ ಮುಂದಿನ ಕ್ರಮ ಕೈಗೊಳ್ಳಬೇಕು ಎಂದರು. ಇದೇ ಸಂದರ್ಭದಲ್ಲಿ ಸಿಡಾಕ್ ಜಂಟಿ ನಿರ್ದೇಶಕ ಜಿ.ಯು.ಹುಡೇದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶಿವಮಾನ್ಯಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ಶರಣಮ್ಮ ಸೇರಿದಂತೆ ಇತರೆ ವಿವಿಧ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಸಭೆಯಲ್ಲಿ ಇದ್ದರು.

## ವಿಜೃಂಭಣೆಯಿಂದ ಜರುಗಿದ ಅಮೋಘಸಿದ್ದೇಶ್ವರ ಜಾತ್ರೆ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ತಾಲ್ಲೂಕಿನ ಸುಕ್ಷೇತ್ರ ಚಬನೂರ** ಗ್ರಾಮದ ಅಮೋಘ ಸಿದ್ದೇಶ್ವರ ಜಾತ್ರಾ ಮಹೋತ್ಸವವು ಬಾದ್ಮಿ ಅಮವಾಸೆಯಂದು ಶನಿವಾರ ಸಂಭ್ರಮದಿಂದ ನೆರವೇರಿತು.

ಶುಕ್ರವಾರ ಸಂಜೆ ಪುರಾಣ ಮಂಗಲ ಮತ್ತು



**ಪ್ರತಿಭಾ ಪುರಸ್ಕಾರ ನಡೆಯಿತು. ರೋಣ ತಾಲ್ಲೂಕು ಬೂದಿಹಾಳ ಗ್ರಾಮದ ಗವಿಸಿದ್ದೇಶ್ವರ ಶಾಸ್ತ್ರೀಜಿ ಅವರಿಂದ ನಡೆದು ಬಂದ 'ಕಲ್ಯಾಣ ದರ್ಶನ' ಪ್ರವಚನ ಕಾರ್ಯಕ್ರಮವು ಮಹಾಮಂಗಳವಾಯಿತು.**

ಗ್ರಾಮದಲ್ಲಿಯೇ ವ್ಯಾಸಂಗ ಮಾಡಿ ಈ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಶನಿವಾರ ಬೃಹತ್ ಉಚಿತ ನೇತ್ರ ಮತ್ತು ಆರೋಗ್ಯತಪಾಸಣಾ ಶಿಬಿರ ನಡೆಯಲಿದ್ದು ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆಯ ಮುಖ್ಯಸ್ಥ ಡಾ.ಪ್ರಭುಗೌಡ ಬ.ಲಿಂಗದಳ್ಳಿ,(ಚಬನೂರ) ಹಾಗೂ ಬಿಎಲ್.ಡಿ.ಇ ಸಂಸ್ಥೆಯ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಸಂಂಯುಕ್ತಾಶ್ರಯದಲ್ಲಿ ಚಬನೂರ ಗ್ರಾಮದ ಆರೋಗ್ಯ ಇಲಾಖೆ ಹಾಗೂ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲಾ ಆವರಣದಲ್ಲಿ ನಡೆಯಿತು.

ರಾತ್ರಿ ವಿವಿಧ ಗ್ರಾಮಗಳಿಂದ ಬಂದಿದ್ದ ಡೊಳ್ಳಿನ ಮೇಳದವರ ಡೊಳ್ಳಿನ ಕೈಪಟ್ಟು ವಾದನ ಗ್ರಾಮದಲ್ಲಿ ಮಾರ್ಧನಿಸಿತು. ಭಕ್ತಾದಿಗಳಿಗೆ ಕೈಚಕ್ಕಳಿ ಪ್ರಸಾದ ವಿತರಣೆ ಮಾಡಲಾಯಿತು. ನಂತರ ನಸುಕಿನಲ್ಲಿ ದೇವರ ಹೇಳಿಕೆ ಯಾಯಿತು. ಉತ್ಸವದಲ್ಲಿ ನೂರಾರು ಗ್ರಾಮಗಳಿಂದ ಬಂದಿದ್ದ ಭಕ್ತಾದಿಗಳು ಪಾಲ್ಗೊಂಡಿದ್ದರು.

## ಮಾನ್ವಿ ಪಟ್ಟಣಕ್ಕೆ ಸಮರ್ಪಕ ನೀರು ಪೂರೈಕೆ ಮಾಡುವಲ್ಲಿ ಪುರಸಭೆ ಮುಖ್ಯಾಧಿಕಾರಿಗಳು ವಿಫಲ. :ಗಂಗಾಧರ ನಾಯಕ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಪತ್ರಿಕಾ ಭವನದಲ್ಲಿ ಮಾಜಿ ಶಾಸಕ ಗಂಗಾಧರ ನಾಯಕ ಸುದ್ದಿಗಾರರೊಂದಿಗೆ ಮಾತನಾಡಿ ಪುರಸಭೆ ಮುಖ್ಯಾಧಿಕಾರಿಗಳಿಗೆ ಹಾಗೂ ತಹಸೀಲ್ದಾರ್ ಸೇರಿದಂತೆ ಜಿಲ್ಲಾಧಿಕಾರಿಗಳಿಗೆ ಮತ್ತು ಪುರಸಭೆ ಆಡಳಿತಾಧಿಕಾರಿಗಳಾಗಿರುವ ಜಿಲ್ಲಾ ಸಹಾಯಕ ಉಪವಿಭಾಗಧಿಕಾರಿಗಳಿಗೆ ಮಾನ್ವಿ ಪಟ್ಟಣದಲ್ಲಿ ಬೇಸಿಗೆಯಲ್ಲಿ ಜನರಿಗೆ ಅಗತ್ಯವಾದ ಶುದ್ದವಾದ ಕುಡಿಯುವ ನೀರನ್ನು ಪೂರೈಸುವಂತೆ ಅನೇಕ ಬಾರಿ ಮನವಿ ಸಲ್ಲಿಸಿದರು ಕೂಡ ಯಾವುದೆ ಕ್ರಮ ಕೈಗೊಳ್ಳದೆ ಇರುವುದು ತಾಲೂಕು ಆಡಳಿತ ಸಂಪುರ್ಣವಾಗಿ ನಿಷ್ಕ್ರಯ ಗೊಂಡಿರುವುದನ್ನು ಸೂಚಿಸುತ್ತದೆ.**

ಪುರಸಭೆ ಅಧಿಕಾರಿಗಳು ಶುದ್ದ ನೀರು




ಪೂರೈಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ರಾಜ್ಯ ಸರಕಾರ ಪಟ್ಟಣದ 50ಸಾವಿರ ಜನಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪಟ್ಟಣದ 27 ವಾರ್ಡಗಳಿಗೆ ನಿರಂತರವಾಗಿ ಕುಡಿಯುವ ನೀರನ್ನು ಒದಗಿಸುವುದಕ್ಕೆ 73 ಕೋಟಿ ವೆಚ್ಚದಲ್ಲಿ ಅಮೃತ್ತ –2 ಯೋಜನೆಯನ್ನು ಮಂಜೂರು ಮಾಡಿದರು ಕೂಡ ಕಾಮಾಗಾರಿ ಪ್ರಗತಿಯು ವಿಳಂಬಗತಿಯಲ್ಲಿ ಸಾಗುತ್ತಿದೆ, ರಬ್ಬಣಕಲ್ ಕುಡಿಯು ನೀರಿನ ಕೆರೆಗೆ ನೀರು ಪೂರೈಸುವ ಕಾಲುವೆಗೆ ಅಕ್ಕಪಕ್ಕದ ಮನೆಯವರು ಚರಂಡಿ ನೀರು ಬಿಡುತ್ತಿರುವುದರಿಂದ ಕೆರೆಯ ನೀರು ಕಲುಷಿತಗೊಂಡು ಜನರ ಆರೋಗ್ಯದ ಮೇಲೆ ಪರಿಣಾಮವಾಗುತ್ತಿದೆ.

ಪಟ್ಟಣದ ಅಲ್ಪ ಸಂಖ್ಯಾತ ವಾರ್ಡಗಳಲ್ಲಿ ನಿರ್ಮಿಸಲಾದ ಸಿ.ಸಿ.ರಸ್ತೆ ಕಳಪೆ ಗುಣಮಟ್ಟದಿಂದ ಕೂಡಿದು. ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಹಾಗೂ ಉತ್ತಮ ಆಡಳಿತ ನೀಡುವಲ್ಲಿ ವಿಫಲರಾಗಿರುವ ಅಧಿಕಾರಿಗಳ ಮೇಲೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಮುಂದಿನ ದಿನಗಳಲ್ಲಿ ಬಿಜೆಪಿ ಮಾನ್ವಿ ಮಂಡಲ ವತಿಯಿಂದ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು. ಮಾಜಿ ಮಾನ್ವಿ ಮಂಡಲಾ ಅಧ್ಯಕ್ಷರಾದ ಜಿ.ಸುಧಾಕರ್ ಮಾತನಾಡಿದರು. ರಾಯಪ್ಪ ವಕೀಲರು, ಜಗದೀಶ ಒತ್ತೂರು, ಶ್ರೀನಿವಾಸ, ಈರಣ್ಣ, ಶರಣಯ್ಯಸ್ವಾಮಿ, ರವಿಪಾಟೀಲ್, ಉಮಾಪತಿ ನಾಯಕ, ಕುಮಾರಸ್ವಾಮಿ ಮೇದಾ, ಕರೀಂಸಾಬ್,ವೆಂಕಟೇಶಪ್ಪ, ಭಾಸ್ಕರ್ ಜಗ್ಗಿ ಸೇರಿದಂತೆ ಇನ್ನಿತರರು ಇದ್ದರು.

## ಡೆಂಗ್ಯೂ ಹರಡದಂತೆ ಮುಂಜಾಗ್ರತೆ ವಹಿಸಿ :ಡಾ. ರುದ್ರಗೌಡ ಪಾಟೀಲ್

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ರಾಷ್ಟ್ರೀಯ ಡೆಂಗ್ಯೂ ದಿನ ಆಚರಣೆ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಅಭಿಯಾನದಕ್ಕೆ ಚಾಲನೆ ನೀಡಿ ಮಾತನಾಡಿದ ಮುಖ್ಯ ವೈದ್ಯಾಧಿಕಾರಿ ಡಾ: ರುದ್ರಗೌಡ ಪಾಟೀಲ್ ರವರು ಡೆಂಗ್ಯೂ ವೈರಸ್ ಸೋಂಕಿತ ಈಡಿಸ್ ಸೊಳ್ಳೆ ಸಮುದಾಯದಲ್ಲಿ ಬೇರೆಯವರಿಗೆ ಕಚ್ಚುವುದರಿಂದ ಈ ರೋಗ ಪ್ರಸರಣವಾಗುವುದು.**




ಇದಕ್ಕೆ ಸೊಳ್ಳೆ ನಿಯಂತ್ರಣ ಹಾಗೂ ಮುಂಜಾಗ್ರತ ಕ್ರಮವಹಿಸಬೇಕು. ನಿಂತ ಸ್ವಚ್ಛ ನೀರಿನಲ್ಲಿ ಲಾರ್ವಾ ಆಗುತ್ತವೆ.ಆದ್ದರಿಂದ ಪರಿಸರ ಸ್ವಚ್ಛತೆ ಜೊತೆಗೆ ಮನೆಯ ಒಳಗೆ ಹೊರಗೆ ಪರಿಕರಗಳನ್ನು ಭದ್ರವಾಗಿ ಮುಚ್ಚಿಡುವುದು ಹಾಗೂ ವಾರಕ್ಕೊಮ್ಮೆ ತೆಗೆಯುವ ಮೂಲಕ ಲಾರ್ವ ಆಗದಂತೆ ಕ್ರಮ ವಹಿಸಬೇಕು.ಜ್ವರ ಸಂಬಂಧಿ ಕಾಯಿಲೆಗಳನ್ನು ಅಲಕ್ಷ ಮಾಡದೇ ವೈದ್ಯರಿಂದ ಚಿಕಿತ್ಸೆ ಪಡೆಯಲು ಮಾಹಿತಿ ನೀಡಿ ಡೆಂಗ್ಯೂ ಮುಂಜಾಗ್ರತೆ ನಿಯಂತ್ರಣ, ಜಾಗೃತಿ ಎಲ್ಲರ ಜವಾಬ್ದಾರಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ: ಅಮೀನ್ ಡಾ : ರುದ್ರಮುನಿ, ಡಾ: ಶ್ರೀನಿಧಿ, ಡಾ: ಪ್ರಗತಿ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಪ್ರಾಣೇಶ್, ಸಾಂಕ್ರಾಮಿಕ ರೋಗ ತಜ್ಞ ಅಶೋಕ ಮಡ್ಡಿಕರ , ಎನ್.ಸಿ.ಡಿ ವಿಭಾಗದ ನೀಲಾಂಬಿಕೆ , ಚಂದ್ರಕಲಾ , ಶಾಂತಮ್ಮ ಹಾಗೂ ವಾಸೀಂರೆಹಮಾನ , ಅಮರೇಶ್ , ಇಲಿಯಾಸ್ , ರಾಜಶೇಖರ್ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿಗಳು ಇದ್ದರು.

## ಹಾವು ಕಡಿತದ ಮನೆ ಭೇಟಿ: ಮೂಢನಂಬಿಕೆ ಬಿಟ್ಟು ಚಿಕಿತ್ಸೆ ಪಡೆಯಿರಿ: ನಿಖಿಲ್ ಹೊಸಮನಿ

ನೈಜ್ಯ ದೆಸೆ ನ್ಯೂಸ್


**ಸಿಂಧನೂರು: ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಇತ್ತೀಚಿನ ದಿನಗಳಲ್ಲಿ ಹಾವು ಕಡಿತ ಮತ್ತು ನಾಯಿ ಕಡಿತದ ಪ್ರಕರಣಗಳು ಹೆಚ್ಚಾಗುತ್ತಿದ್ದು, ಈ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯವಾಗಿದೆ ಎಂದರು ಜಿಲ್ಲಾ ಪಂಚಾಯತ,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಮತ್ತು ತಾಲೂಕಾರೋಗ್ಯಾಧಿಕಾರಿಗಳ ಕಾರ್ಯಾಲಯದಿಂದ ನಡೆದ ಜಾಗೃತಿ ಕಾರ್ಯಕ್ರಮದ ಭಾಗವಾಗಿ ಕಾರ್ಯಾಲಯ ತಂಡ ಇಂದು ವೆಂಕಟೇಶ್ವರ ಕ್ಯಾಂಪ್ ನ ಹಾವು ಕಡಿತದಿಂದ ಮರಣ ಹೊಂದಿದ ಮನೆ ಭೇಟಿ ನೀಡಿ ಮಾತನಾಡಿದ ತಾಲೂಕಾ ಎಪಿಡೆಮಲಾಜಿಸ್ಟ ರವರು ಸಾರ್ವಜನಿಕರು.**

ಸಾಮಾನ್ಯವಾಗಿ ಮಾಡುವ ಸಣ್ಣ ಪುಟ್ಟ ತಪ್ಪುಗಳು ಮತ್ತು ವಿಳಂಬ ಧೋರಣೆಗಳು ರೋಗಿಯ ಪ್ರಾಣಕ್ಕೆ ಸಂಚಕಾರ ತರುತ್ತಿವೆ. ವಿಶಾಲವಾದ ಮನೆಗಳಿರಲಿ ಅಥವಾ ತೋಟದ ಮನೆಗಳಿರಲಿ, ರಾತ್ರಿ ವೇಳೆಯಲ್ಲಿ ಸರಿಸೃಪಗಳಿಗೆ ಮತ್ತು ಇತರ ವಿಷ ಜಂತುಗಳಿಗೆ ಬೇರೆ ಕಡೆ ಹೋಗಲು ಸೂಕ್ತ ದಾರಿ ಇಲ್ಲದಂತೆ ಬಾಗಿಲುಗಳನ್ನು ಮುಚ್ಚಿ ಅಥವಾ ಅಡ್ಡಲಾಗಿ ಮಲಗುವುದ–




ರಿಂದ ಅನೇಕ ಬಾರಿ ಹಾವು ಕಡಿತದಂತಹ ಅವಘಡಗಳು ಸಂಭವಿಸುತ್ತವೆ. ಹೀಗಾಗಿ ರಾತ್ರಿ ಮಲಗುವಾಗ ಜಾಗರೂಕರಾಗಿರುವುದು ಮತ್ತು ಜಂತುಗಳ ಸಂಚಾರಕ್ಕೆ ಅಡ್ಡಿಯಾಗದಂತೆ ಎಚ್ಚರ ವಹಿಸುವುದು ಅತ್ಯಂತ ಮುಖ್ಯವಾಗಿದೆ ಎಂದರು ತಾಲೂಕ ಹಿರಿಯ.

ಆರೋಗ್ಯ ಸಹಾಯಕಸಂಗನಗೌಡ ಪಾಟೀಲ್ ಮಾತನಾಡಿ ಹೆಚ್ಚಿನ ಸಂದರ್ಭಗಳಲ್ಲಿ ಹಾವು ಕಡಿತಕ್ಕೊಳಗಾದ ತಕ್ಷಣ ಜನರು ತೀವ್ರ ಆತಂಕಕ್ಕೆ ಒಳಗಾಗಿ, ವೈಜ್ಞಾನಿಕ ಚಿಕಿತ್ಸೆಯನ್ನು ಮರೆತು ಸ್ಥಳೀಯ ಮಾಂತ್ರಿಕರ ಹತ್ತಿರ ಓಡುವುದು ಇಂದಿಗೂ ಕಂಡುಬರುತ್ತಿದೆ. ನಾಟಿ ವೈದ್ಯರ ಬಳಿ ಹೋಗಿ ಬೇರು ಕುಡಿಸುವುದು, ಮಂತ್ರಿಸುವುದು ಹಾಗೂ ಅರ್ಹತೆಯಿಲ್ಲದ ಅನಧಿಕೃತ ವ್ಯಕ್ತಿಗಳ ಹತ್ತಿರ ಹೋಗಿ ಅವೈಜ್ಞಾನಿಕ ಚಿಕಿತ್ಸೆ ಕೊಡಿಸುವುದರಿಂದ ಅಮೂಲ್ಯವಾದ ಸಮಯ ವ್ಯರ್ಥವಾಗುತ್ತದೆ. ಇದರ ಜೊತೆಗೆ ರೋಗಿಗೆ ಅತಿಯಾದ ಭಯ ಹುಟ್ಟಿಸಿ, ಆತಂಕದಿಂದಲೇ ಹೃದಯಾಘಾತವಾಗುವಂತೆ ಮಾಡುವುದು ಮತ್ತು ರಾತ್ರಿ ಪೂರ್ತಿ ನಿದ್ದೆ ಮಾಡದಂತೆ ಪ್ರೇರೇಪಿಸಿ ರೋಗಿಯನ್ನು




ಮತ್ತಷ್ಟು ದಣಿಸುವುದು ತಪ್ಪು ಆಚರಣೆಗಳಾಗಿವೆ.

ಕಡಿತಕ್ಕೊಳಗಾದ ಜಾಗದಲ್ಲಿ ಬ್ಲೇಡ್ ಅಥವಾ ಚಾಕುವಿನಿಂದ ಗಾಯ ಮಾಡುವುದು, ರಕ್ತವನ್ನು ಬಾಯಿಯಿಂದ ಹೀರಲು ಪ್ರಯತ್ನಿಸುವುದು ಮತ್ತು ವಿಷ ದೇಹಕ್ಕೆ ಹರಡಬಾರದು ಎಂಬ ತಪ್ಪು ಕಲ್ಪನೆಯಿಂದ ರಕ್ತ ಚಲನೆಗೆ ಸಂಪೂರ್ಣ ಅಡತಡೆ ಉಂಟಾಗುವಂತೆ ಬಿಗಿಯಾಗಿ ಹಗ್ಗ ಅಥವಾ ಬಟ್ಟೆಯನ್ನು ಕಟ್ಟುವುದು ರೋಗಿಯ ಸ್ಥಿತಿಯನ್ನು ಮತ್ತಷ್ಟು ಗಂಭೀರಗೊಳಿಸುತ್ತದೆ. ಇಂತಹ ತಪ್ಪು ಕ್ರಮಗಳಿಂದಾಗಿ ಅಂಗಾಂಗಗಳು ನಿಷ್ಕ್ರಿಯಗೊಳ್ಳುವ ಸಾಧ್ಯತೆ ಇರುತ್ತದೆ. ಇವೆಲ್ಲವುಗಳ ನಡುವೆ ಸಾರ್ವಜನಿಕರು ಸ್ಥಳೀಯವಾಗಿ ತಪ್ಪು ಪ್ರಯೋಗಗಳನ್ನು ಮಾಡುತ್ತಾ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಲು ವಿಪರೀತ ವಿಳಂಬ ಮಾಡುತ್ತಿದ್ದಾರೆ.

ಹಾವು ಮತ್ತು ನಾಯಿ ಕಡಿತಕ್ಕೆ ಸಕಾಲದಲ್ಲಿ ಚಿಕಿತ್ಸೆ ಸಿಗದಿದ್ದರೆ ವಿಷ ಅಥವಾ ರೇಬಿಸ್ ವೈರಸ್ ದೇಹದಾದ್ಯಂತ ಹರಡಿ ಸಾವು ಸಂಭವಿಸುವ ಸಾಧ್ಯತೆ ದಟ್ಟವಾಗಿರುತ್ತದೆ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ಆಂಟಿ–ಸ್ನೇಕ್ ವೆನಮ್ (ASV) ಮತ್ತು ನಾಯಿ ಕಡಿತಕ್ಕೆ ಆಂಟಿ–ರೇಬಿಸ್ ವ್ಯಾಕ್ಸಿನ್ (ARV) ಚುಚ್ಚುಮದ್ದುಗಳು ಉಚಿತವಾಗಿ ಲಭ್ಯವಿವೆ. ಯಾವುದೇ ವಿಷ ಜಂತು ಅಥವಾ ನಾಯಿ ಕಡಿದ ತಕ್ಷಣ ಯಾವುದೇ ವಿಳಂಬವಿಲ್ಲದೆ ಹತ್ತಿರದ ಅರ್ಹ ವೈದ್ಯರಿದ್ದ ಆಸ್ಪತ್ರೆಗೆ ದಾಖಲಿಸಿ ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸುವ ಮೂಲಕ ಸಾರ್ವಜನಿಕರು ರೋಗಿಯ ಜೀವ ರಕ್ಷಿಸಬೇಕಾಗಿ ಆರೋಗ್ಯ ಇಲಾಖೆಯ ಅಧಿಕಾರಿಗಳು ಕಳಕಳಿಯ ವಿನಂತಿ ಮಾಡಿದರು ಈ ಸಂಧರ್ಭದಲ್ಲಿ ತಾಲೂಕಿ ವಿ.ಬಿ.ಡಿ ಮೇಲ್ವಿಚಾರಕ ಎಫ್.ಎ.ಹಣಗಿ ಮತ್ತು ಸ್ಥಳಿಯ ಸಿಬ್ಬಂದಿಯಾದ ಸಮುದಾಯ ಆರೋಗ್ಯ ಅಧಿಕಾರಿ ಅಭಿಲಾಷ,ಕಿ.ಆ.ಸ ಶ್ವೇತಾ ಗ್ರಾಮಸ್ಥರು ಹಾಜರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್ ಕೋರ್ಸ್

ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್ ಕೋರ್ಸ್ ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್ ಕ್ಷೇತ್ರದಲ್ಲಿ ತಾಂತ್ರಿಕ ಜ್ಞಾನ ಹಾಗೂ ಪ್ರಾಯೋಗಿಕ ಅನುಭವವನ್ನು ನೀಡುವ ಉದ್ದೇಶದಿಂದ ಈ ಕೋರ್ಸ್ ವಿನ್ಯಾಸಗೊಳಿಸಲಾಗಿದೆ. ಐಟಿ ಕ್ಷೇತ್ರದಲ್ಲಿ ಉದ್ಯೋಗ ಪಡೆಯಲು ಅಗತ್ಯವಿರುವ ಹಾರ್ಡ್‌ವೇರ್ ನಿರ್ವಹಣೆ, ಸಿಸ್ಟಮ್ ಇನ್‌ಸ್ಟಾಲೇಶನ್ ಮತ್ತು ನೆಟ್‌ವರ್ಕ್ ನಿರ್ವಹಣಾ ಕೌಶಲ್ಯಗಳನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತದೆ. ಕೋರ್ಸ್ ಉದ್ದೇಶ ಕಂಪ್ಯೂಟರ್ ಹಾರ್ಡ್‌ವೇರ್ ರಚನೆ ಮತ್ತು ಕಾರ್ಯವಿಧಾನ ತಿಳಿಸುವುದು ಆಪರೇಟಿಂಗ್ ಸಿಸ್ಟಮ್ ಇನ್‌ಸ್ಟಾಲೇಶನ್ ಹಾಗೂ ನಿರ್ವಹಣೆ ಕಲಿಸುವುದು ನೆಟ್‌ವರ್ಕ್ ಕಾನ್ಫಿಗರೇಶನ್ ಮತ್ತು ನಿರ್ವಹಣಾ ಕೌಶಲ್ಯ ಅಭಿವೃದ್ಧಿ ದೋಷನಿವಾರಣೆ (Trouble-shooting) ಸಾಮರ್ಥ್ಯ ಹೆಚ್ಚಿಸುವುದು ಐಟಿ ಕ್ಷೇತ್ರದಲ್ಲಿ ಉದ್ಯೋಗಾರ್ಹತೆ ಹೆಚ್ಚಿಸುವುದು ಪಠ್ಯಕ್ರಮದ ಪ್ರಮುಖ ವಿಷಯಗಳು ಕಂಪ್ಯೂಟರ್ ಮೂಲಭೂತಾಂಶಗಳು ಹಾರ್ಡ್‌ವೇರ್ ಅಸೆಂಬ್ಲಿಂಗ್ ಮತ್ತು ಮೆಂಟೆನನ್ಸ್ ? BIOS ಸೆಟ್ಟಿಂಗ್‌ಗಳು ಮತ್ತು ಡ್ರೈವರ್ ಇನ್‌ಸ್ಟಾಲೇಶನ್ ? ವಿಂಡೋಸ್ ಮತ್ತು ಲಿನಕ್ಸ್ ಆಪರೇಟಿಂಗ್ ಸಿಸ್ಟಮ್‌ಗಳು ? ನೆಟ್‌ವರ್ಕಿಂಗ್ ಮೂಲಭೂತ ತತ್ವಗಳು ? LAN, WAN, IP Addressing ? ರೌಟರ್ ಮತ್ತು ಸ್ವಿಚ್ ಕಾನ್ಫಿಗರೇಶನ್ ? ನೆಟ್‌ವರ್ಕ್ ಸುರಕ್ಷತೆ ಮೂಲಭೂತಗಳು ? ಸಿಸ್ಟಮ್ ಮತ್ತು ನೆಟ್‌ವರ್ಕ್ ಟ್ರಬಲ್‌ಶೂಟಿಂಗ್ ಒಳಗೊಂಡಿರುವ ಪ್ರಮಾಣಿತ ತಂತ್ರಜ್ಞಾನಗಳು CCNA Routing and Switching MCSA Windows Server 2008 Ubuntu Linux ಕೋರ್ಸ್ ಅವಧಿ ?? 12 ತಿಂಗಳು ವಿದ್ಯಾರ್ಹತೆ ?? SSLC / PUC / Degree

# ಮಾನ್ವಿ ನಗರದಲ್ಲಿ ರಾಜ್ಯ ಹೆದ್ದಾರಿ ಹಾಗೂ ಕುಡಿಯುವ ನೀರಿನ ಕಾಮಗಾರಿ ಪರಿಶೀಲನಾ ಸಭೆ ಶಾಸಕರ ಕಟ್ಟುನಿಟ್ಟಿನ ಸೂಚನೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾನ್ವಿ ನಗರದ ಪ್ರವಾಸಿ ಮಂದಿರದಲ್ಲಿ ಈ ದಿನ ನಗರದಲ್ಲಿ ನಡೆಯುತ್ತಿರುವ ರಾಜ್ಯ ಹೆದ್ದಾರಿ ಕಾಮಗಾರಿಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳ ಮಹತ್ವದ ಸಭೆ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.**

ಸಭೆಯಲ್ಲಿ ತಹಶೀಲ್ದಾರ್ ಮಾನ್ವಿ, ಸಿಪಿಐ ಮಾನ್ವಿ, KWS, RWS ಎಎಂಓ, ಜಲಧಾರೆ, ಅಮೃತ್–2 ಯೋಜನೆ, ಟಿಎಂಸಿ ಮುಖ್ಯಾಧಿಕಾರಿ, GESCOM, KRIDCL ಹಾಗೂ ರಾಜ್ಯ ಹೆದ್ದಾರಿ ನಿರ್ವಹಣಾ ಅಧಿಕಾರಿಗಳು ಭಾಗವಹಿಸಿದ್ದರು. ಶಾಸಕರು ಮಾನ್ವಿ ನಗರದಲ್ಲಿ ನಿಧಾನಗತಿಯಲ್ಲಿ ಸಾಗುತ್ತಿರುವ ರಾಜ್ಯ ಹೆದ್ದಾರಿ ಹಾಗೂ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗಳನ್ನು ತಕ್ಷಣವೇ ಪೂರ್ಣಗೊಳಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆ ಸಾರ್ವಜನಿಕರಿಗೆ ತೊಂದರೆ ಆಗದಂತೆ ಅರ್ಧಕ್ಕೆ ನಿಂತಿರುವ ಚರಂಡಿ ಮತ್ತು ಪೈಪ್‌ಲೈನ್ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಮುಗಿಸಲು ನಿರ್ದೇಶಿಸಿದರು. ಕಾಮಗಾರಿ ವೇಳೆ ಸಾರ್ವಜನಿಕರಿಗೆ ಯಾವುದೇ ಸಮಸ್ಯೆ ಎದುರಾದರೆ ನೇರವಾಗಿ ತಮ್ಮನ್ನು ಸಂಪರ್ಕಿಸಲು ಸೂಚಿಸಿದ ಶಾಸಕರು, ಕೆಲಸ ವಿಳಂಬವಾದರೆ ಜನರು ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಕರ್ನಾಟಕ ನೀರು ಸರಬರಾಜು ಮಂಡಳಿಯ



ಅಧಿಕಾರಿಗಳೊಂದಿಗೆ ಮಾತನಾಡಿದ ಅವರು, ಮಂಡಳಿ ಹಾಗೂ ಪುರಸಭೆಯ ಮುಖ್ಯಾಧಿಕಾರಿಗಳ ನಡುವೆ ಸಮನ್ವಯ ಕೊರತೆಯಿಂದ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿ, ಪರಸ್ಪರ ಮಾಹಿತಿ ವಿನಿಮಯ ಹೆಚ್ಚಿಸಿ ಕಾರ್ಯ ಪೂರ್ಣಗೊಳಿಸಲು ಸೂಚಿಸಿದರು.

ರಾಜ್ಯ ಹೆದ್ದಾರಿ ಅಧಿಕಾರಿಗಳು ಮತ್ತು ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡ ಶಾಸಕರು, ಚರಂಡಿ ಕಾಮಗಾರಿ ನಗರದಲ್ಲಿ ಜನರಿಗೆ ಗಂಭೀರ ಸಮಸ್ಯೆ ಉಂಟುಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾಮಗಾರಿಯ ನಿಧಾನಗತಿಯ ಕಾರಣ ಜನರಿಂದ ತೀವ್ರ ಅಸಮಾಧಾನ ವ್ಯಕ್ತವಾಗುತ್ತಿದೆ ಎಂದರು. ಉಇಖಅಔಓ ಮಾನ್ವಿ ಉಪ ವಿಭಾಗದ ಕಾರ್ಯನಿರ್ವಾಹಕ ಅಧಿಕಾರಿ ವೈಜನಾಥ್ ಸ್ವಾಮಿ ಅವರಿಗೆ ಕಾಮಗಾರಿ ನಡೆಯುವ ಸ್ಥಳಗಳಲ್ಲಿ ಸಿಬ್ಬಂದಿ ಹಾಜರಾತಿ ಕಡ್ಡಾಯಗೊಳಿಸಿ, ಸ್ಥಳಾಂತರಿಸಬೇಕಿರುವ ವಿದ್ಯುತ್ ಕಂಬಗಳನ್ನು ಶೀಘ್ರ ಸ್ಥಳಾಂತರಿಸಿ ಕೆಲಸಗಳಿಗೆ ಅಡ್ಡಿಯಾಗದಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

ನಗರದಾದ್ಯಂತ ನಡೆಯುತ್ತಿರುವ ಅಮೃತ್–2 ಯೋಜನೆಯ ಕಾಮಗಾರಿ ಕುರಿತು ಗುತ್ತಿಗೆದಾರರು ಮತ್ತು ಅಧಿಕಾರಿಗಳ ವಿರುದ್ಧ ಶಾಸಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಇದೇ ರೀತಿಯ ವಿಳಂಬ ಮುಂದುವರಿದರೆ ಸಂಬಂಧಪಟ್ಟ ಮೇಲಧಿಕಾರಿಗಳಿಗೆ ಪತ್ರ ಬರೆದು ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಸಿದರು. ತಾಲೂಕು ಮಟ್ಟದ ಎಲ್ಲಾ ಇಲಾಖೆ ಅಧಿಕಾರಿಗಳು ಪರಸ್ಪರ ಸಮನ್ವಯ ಸಾಧಿಸಿ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಿ ಕ್ಷೇತ್ರದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಶಾಸಕರು ಸೂಚಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಹಾಗೂ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅಬ್ದುಲ್ ಗಫೂರ್ ಸಾಬ್, ಪಂಚ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಬಿಕೆ ಅಮರೇಶಪ್ಪ ವಕೀಲರು, ಸಯ್ಯದ್ ಪಾಷಾ, ಜೈಪ್ರಕಾಶ್, ರಾಮಕೃಷ್ಣ, ಎಚ್‌ಬಿಎಂ ಭಾಷಾ, ಸತ್ತರ್ ಬಂಗ್ಲೇವಾಲೆ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

## 100 ಕೋಟಿ ಕ್ಲಬ್ ಸೇರಿದ ಮರಾಠಿ ಚಿತ್ರ ರಾಜಾ ಶಿವಾಜಿ

ನೈಜ್ಯ ದೆಸೆ ನ್ಯೂಸ್

**ಮುಂಬೈ: ನೂರು ಕೋಟಿ ಕ್ಲಬ್ ಸೇರಿದ ಎರಡನೇ ಮರಾಠಿ ಚಿತ್ರ ಎಂಬ ಹೆಗ್ಗಳಿಕೆಗೆ ರಿತೇಶ್ ದೇಶ್‌ಮುಖ್ ಅವರ ರಾಜಾ ಶಿವಾಜಿ ಚಲನಚಿತ್ರ ದಾಖಲೆ ಬರೆದಿದೆ. ಕಳೆದ 2016 ರಲ್ಲಿ ನಾಗರಾಜ್ ಮಂಜುಳೆ ಅವರ ಸೈರಾತ್ ಮರಾಠಿ ಚಿತ್ರ 100 ಕೋಟಿ ಕ್ಲಬ್ ಸೇರಿ ಇತಿಹಾಸ ನಿರ್ಮಿಸಿತ್ತು. ಇದೀಗ ರಾಜ ಶಿವಾಜಿ ಚಿತ್ರ ಮತ್ತೆ 100 ಕೋಟಿ ಲಾಭ ಗಳಿಸಿ ದಾಖಲೆ ಬರೆದಿದೆ.**




ಮರಾಠಾ ನಾಯಕ ಛತ್ರಪತಿ ಶಿವಾಜಿ ಮಹಾರಾಜರ ಜೀವನ ಮತ್ತು ವಿಜಯಗಳನ್ನು ಆಧರಿಸಿದ ರಾಜ ಶಿವಾಜಿ ಚಿತ್ರವು ತನ್ನ ಮೊದಲ ವಾರಾಂತ್ಯದಲ್ಲಿಯೇ 30 ಕೋಟಿ ರೂ.ಗಳಿಗೂ ಹೆಚ್ಚು ನಿವ್ವಳ ಲಾಭ ಗಳಿಸಿತು. ವಾರದ ದಿನಗಳಲ್ಲಿ ಅದು ತನ್ನ ಆವೇಗವನ್ನು ಉಳಿಸಿಕೊಂಡಿತು, ಮೊದಲ ವಾರ 52.65 ಕೋಟಿ ಮತ್ತು ಎರಡನೇ ವಾರ 77 ಕೋಟಿ ಗಳಿಸಿತು. ತನ್ನ ಮೂರನೇ ವಾರಾಂತ್ಯದಲ್ಲಿ, ರಾಜಾ ಶಿವಾಜಿ ಬಾಕ್?ಸ ಆಫೀಸ್‌ನಲ್ಲಿ ಮತ್ತೆ ಏರಿಕೆ ಕಂಡಿದ್ದು, 7.60 ಕೋಟಿ ನಿವ್ವಳ ಗಳಿಸಿತು. 17 ದಿನಗಳ ನಂತರ, ಅದರ ದೇಶೀಯ ಗಳಿಕೆ ಈಗ 84.55 ಕೋಟಿ ನಿವ್ವಳ (100 ಕೋಟಿ ಒಟ್ಟು) ತಲುಪಿದೆ. ಹೆಚ್ಚಿನ ಮರಾಠಿ ಚಿತ್ರಗಳಿಗೆ ರೂಢಿಯಂತೆ ರಾಜಾ ಶಿವಾಜಿ ವಿದೇಶಿ ಬಿಡುಗಡೆಯನ್ನು ಪಡೆಯಲಿಲ್ಲ, ಇದು ಈ ಸಾಧನೆಯನ್ನು ಇನ್ನಷ್ಟು ಬೆರಗುಗೊಳಿಸುತ್ತದೆ. ಭಾನುವಾರ ಚಿತ್ರ 4 ಕೋಟಿ ಗಳಿಸಿತು ಇಂದಿನ ಕುಸಿತವನ್ನು ಲೆಕ್ಕಹಾಕಿದ ನಂತರವೂ, ನಾಲ್ಕನೇ ವಾರಾಂತ್ಯಕ್ಕೆ ಪ್ರವೇಶಿಸುವ ಮೊದಲು 5 ಕೋಟಿ ಗಳಿಕೆಯನ್ನು ಸೇರಿಸುವ ನಿರೀಕ್ಷೆಯಿದೆ. ಸೈರಾತ್‌ನ ನೆರಳಿನಲ್ಲೇ ರಾಜ ಶಿವಾಜಿ ಮುಂದುವರೆದಿದೆ, ಜಾತಿ ವಿಭಜನೆಯ ಜೌಗು ಪ್ರದೇಶದಲ್ಲಿ ಸಿಲುಕಿದ ಪ್ರೇಮಿಗಳ ಚಿತ್ರವಾದ ಸೈರಾತ್ ಇತಿಹಾಸದಲ್ಲಿ ಅತಿ ಹೆಚ್ಚು ಗಳಿಕೆಯ ಮರಾಠಿ ಚಿತ್ರವಾಗಿ ಉಳಿದಿದೆ. ಈ ಚಿತ್ರವು ತನ್ನ ಜೀವಿತಾವಧಿಯಲ್ಲಿ 110 ಕೋಟಿ ಗಳಿಕೆ ಗಳಿಸಿದೆ, ರಾಜಾ ಶಿವಾಜಿ ಚಿತ್ರವನ್ನು ರಿತೇಶ್ ಬರೆದು ನಿರ್ದೇಶಿಸಿದ್ದಾರೆ ಮತ್ತು ಮುಂಬೈ ಫಿಲ್?ಮ ಕಂಪನಿ ಮತ್ತು ಜಿಯೋ ಸ್ಟುಡಿಯೋಸ್ ಅಡಿಯಲ್ಲಿ ಜೆನೆಲಿಯಾ ಡಿಸೋಜಾ ಮತ್ತು ಜ್ಯೋತಿ ದೇಶಪಾಂಡೆ ನಿರ್ಮಿಸಿದ್ದಾರೆ.

# ಉದ್ಯೋಗ ಖಾತ್ರಿ ಯೋಜನೆಯಲ್ಲಿ 16 ಲಕ್ಷ ದುರ್ಬಳಕೆ

## ಅನುದಾನ ವಸೂಲಿಗೆ ಆದೇಶಿಸಿದ ಜಿಪಂ ಸಿಇಒ ಈಶ್ವರ ಕಾಂದೂ




ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ತಾಲೂಕಿನ ಜಾಲಹಳ್ಳಿ ಹಾಗೂ ಬಿ.ಗಣೇಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಅಡಿಯಲ್ಲಿ ಸುಮಾರು ?16.82 ಲಕ್ಷ ಅನುದಾನ ದುರ್ಬಳಕೆಯಾಗಿರುವುದು ತನಿಖೆಯಲ್ಲಿ ಬಹಿರಂಗವಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದುರ್ಬಳಕೆಯಾದ ಹಣವನ್ನು ವಸೂಲಿ ಮಾಡಲು ಜಿಲ್ಲಾ ಪಂಚಾಯಿತಿ ಸಿಇಒ ಈಶ್ವರ ಕುಮಾರ ಕಾಂದೂ ಆದೇಶ ನೀಡಿದ್ದಾರೆ.**

ತಾಲೂಕಿನಲ್ಲಿ ನರೇಗಾ ಯೋಜನೆಯಲ್ಲಿ ಈ ಹಿಂದೆ ಕೋಟ್ಯಂತರ ರೂಪಾಯಿ ದುರ್ಬಳಕೆ ಪ್ರಕರಣ ಬೆಳಕಿಗೆ ಬಂದಿದ್ದು, 35ಕ್ಕೂ ಹೆಚ್ಚು ಅಧಿಕಾರಿಗಳು ಅಮಾನತುಗೊಂಡಿದ್ದರೂ ಅಕ್ರಮಗಳು ನಿಲ್ಲದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಕೆಲ ತಿಂಗಳ ಹಿಂದೆ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಅಧಿಕಾರಿಗಳ ತಂಡ ನರೇಗಾ ಕಾಮಗಾರಿಗಳ ಪರಿಶೀಲನೆಗಾಗಿ ದೇವದುರ್ಗ ತಾಲೂಕಿನ ವಿವಿಧ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿತ್ತು. ಈ ವೇಳೆ ಜಾಲಹಳ್ಳಿ ಮತ್ತು ಬಿ.ಗಣೇಕಲ್ ಗ್ರಾಮ ಪಂಚಾಯಿತಿಗಳಲ್ಲಿ ಅನುದಾನ ದುರ್ಬಳಕೆಯ ಕುರಿತು ರಾಜ್ಯ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯಕ್ಕೆ ವರದಿ ಸಲ್ಲಿಸಲಾಗಿತ್ತು. ಈ ವರದಿ ಆಧಾರದ ಮೇಲೆ ರಾಜ್ಯ ಮಟ್ಟದ ತಾಂತ್ರಿಕ ತಂಡವನ್ನು ರಚಿಸಿ ವಿಸ್ತೃತ ತನಿಖೆ ನಡೆಸಲಾಗಿತ್ತು.

ತನಿಖೆಯಲ್ಲಿ ಎರಡು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 16 ಕಾಮಗಾರಿಗಳಲ್ಲಿ ಬಿಡುಗಡೆಯಾದ ಅನುದಾನಕ್ಕೆ ತಕ್ಕಂತೆ ಕಾಮಗಾರಿ ನಡೆಸದೇ, ಪ್ರತಿವರ್ಷ ಒಂದೇ ಸ್ಥಳದಲ್ಲಿ ಕೆಲಸ ತೋರಿಸಿ ಹಣ ದುರ್ಬಳಕೆ ಮಾಡಿರುವುದು ಪತ್ತೆಯಾಗಿದೆ. ತಾಂತ್ರಿಕ ತಂಡ ನೀಡಿದ ವರದಿ ಆಧಾರದ ಮೇಲೆ ದುರ್ಬಳಕೆಗೆ ಕಾರಣರಾದ 7 ಜನರಿಂದ 16,82,778 ವಸೂಲಿ ಮಾಡಿ ನರೇಗಾ



ಯೋಜನೆಯ ಕೆಎಸ್‌ಇಜಿಎಫ್ ಖಾತೆಗೆ ಜಮಾ ಮಾಡಲು ತಾಪಂ ಇಒ ರಾಜೇಂದ್ರಕುಮಾರ್ ಅವರಿಗೆ ಜಿಪಂ ಸಿಇಒ ಸೂಚನೆ ನೀಡಿದ್ದಾರೆ. ಈ ಹಿಂದೆ 2020ರಿಂದ 2023ರ ಅವಧಿಯಲ್ಲಿ ನರೇಗಾ ಯೋಜನೆಯಲ್ಲಿ 200 ಕೋಟಿಗೂ ಅಧಿಕ ಅನುದಾನ ದುರ್ಬಳಕೆ ಪ್ರಕರಣ ದಾಖಲಾಗಿತ್ತು.

ಆ ಪ್ರಕರಣದಲ್ಲಿ ಅಂದಿನ ತಾಪಂ ಇಒ ಪಂಪಾಪತಿ ಹಿರೇಮಠ ಹಾಗೂ ಎಡಿ ಬಸಣ್ಣ ನಾಯಕ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, 35ಕ್ಕೂ ಹೆಚ್ಚು ಪಿಡಿಒಗಳನ್ನು ಅಮಾನತು ಮಾಡಲಾಗಿತ್ತು. ಆ ಪ್ರಕರಣದ ಚರ್ಚೆ ಇನ್ನೂ ಮುಂದುವರಿದಿರುವಾಗಲೇ ಮತ್ತೊಂದು ಅವ್ಯವಹಾರ ಬೆಳಕಿಗೆ ಬಂದಿರುವುದು ಜನರಲ್ಲಿ ಅಸಮಾಧಾನ ಹೆಚ್ಚಿಸಿದೆ. ನರೇಗಾ ಅನುದಾನ ದುರ್ಬಳಕೆ ಪ್ರಕರಣ ಯಾರು ಎಷ್ಟು ಹಣ ದುರ್ಬಳಕೆ ಮಾಡಿದ್ದಾರೆ? ದೇವದುರ್ಗ ತಾಲೂಕಿನ ಜಾಲಹಳ್ಳಿ ಹಾಗೂ ಬಿ.ಗಣೇಕಲ್ ಗ್ರಾಮ ಪಂಚಾಯಿತಿಗಳಲ್ಲಿ ನಡೆದ ನರೇಗಾ ಅನುದಾನ ದುರ್ಬಳಕೆ ಪ್ರಕರಣದಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸೇರಿ 7 ಜನರಿಂದ ಒಟ್ಟು ?16,82,778 ವಸೂಲಿಗೆ ಜಿಲ್ಲಾ ಪಂಚಾಯಿತಿ ಸಿಇಒ ಈಶ್ವರ ಕುಮಾರ ಕಾಂದೂ ಆದೇಶಿಸಿದ್ದಾರೆ. ಈ ಎಲ್ಲಾ ಮೊತ್ತಗಳನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಿ ನರೇಗಾ ಯೋಜನೆಯ ಕೆಎಸ್‌ಇಜಿಎಫ್ ಖಾತೆಗೆ ಜಮಾ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ರಾಜ್ಯ ಮಟ್ಟದ ತಾಂತ್ರಿಕ ತಂಡದ ತನಿಖೆಯಲ್ಲಿ ಕಾಮಗಾರಿ ನಡೆದ ಪ್ರಮಾಣ ಹಾಗೂ ಬಿಡುಗಡೆಯಾದ ಅನುದಾನದಲ್ಲಿ ವ್ಯತ್ಯಾಸ ಕಂಡುಬಂದ ಹಿನ್ನೆಲೆ ಈ ಕ್ರಮ ಕೈಗೊಳ್ಳಲಾಗಿದೆ.

ವರದಿ: ಖಾಜಾ ಹುಸೇನ್ ಬಾಬಾ ಜಾಲಹಳ್ಳಿ

### ದುರ್ಬಳಕೆ ಮೊತ್ತದ ವಿವರ

- **ಅಂದಿನ ತಾಪಂ ಸಹಾಯಕ ನಿರ್ದೇಶಕ ಅಣ್ಣರಾವ್ 3,40,163**
- **ತಾಪಂ ತಾಂತ್ರಿಕ ಸಹಾಯಕ ಪರಿಮಿ ಸಾಗರ್ 3,40,163**
- **ಜಾಲಹಳ್ಳಿ ಗ್ರಾಪಂ ಪಿಡಿಒ ನರಸಪ್ಪ ? 1,01,912**
- **ಜಾಲಹಳ್ಳಿ ಗ್ರಾಪಂ ಹಿಂದಿನ ಅಧ್ಯಕ್ಷೆ ವಿಜಯಲಕ್ಷ್ಮೀ ಯಂಕೋಬ 1,01,912**
- **ಬಿ.ಗಣೇಕಲ್ ಗ್ರಾಪಂ ಪಿಡಿಒ ಶರಣಬಸಯ್ಯ ಸ್ವಾಮಿ 92,987**
- **ಬಿ.ಗಣೇಕಲ್ ಗ್ರಾಪಂ ಹಿಂದಿನ ಅಧ್ಯಕ್ಷೆ ರಂಗಮ್ಮ ಸೋಮಯ್ಯ 92,987**
- **ತಾಪಂ ಹಿಂದಿನ ತಾಂತ್ರಿಕ ಸಹಾಯಕ ಇಂಜಿನಿಯರ್ ರವಿಕಿರಣ್ 6,12,651**

# ಯುವ ಸಾಹಿತ್ಯ ಸೌರಭ ಕಾರ್ಯಕ್ರಮದಲ್ಲಿ ಕೃತಿಗಳ ಲೋಕಾರ್ಪಣೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಗ್ಯಾಲಕ್ಸಿ ಹಾಲ್‌ನಲ್ಲಿ ಯುವಜನ ಬಳಗ ವತಿಯಿಂದ ಹಮ್ಮಿಕೊಂಡಿದ್ದ "ಯುವ ಸಾಹಿತ್ಯ ಸೌರಭ" ಕಾರ್ಯಕ್ರಮದಲ್ಲಿ ಯುವ ಕವಿಗಳು ಹಾಗೂ ಸಾಹಿತ್ಯಾಸಕ್ತರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ವಿವಿಧ ಸಾಹಿತ್ಯ ಚಟುವಟಿಕೆಗಳು ಜರುಗಿದವು. ಹಿರಿಯ ಪತ್ರಕರ್ತ ಬಸವರಾಜ ಬೋಗವತಿ ಪ್ರಾಸ್ತಾವಿಕವಾಗಿ ಮಾತನಾಡಿ, ಮನುಷ್ಯ ಶಾಶ್ವತ ಅಲ್ಲ, ಆದರೆ ಪುಸ್ತಕಗಳು ಶಾಶ್ವತವಾಗಿವೆ ಎಂದು ಅಭಿಪ್ರಾಯಪಟ್ಟರು.**

ಯುವ ಕವಿಗಳಿಗೆ ವೇದಿಕೆ ಕಲ್ಪಿಸುವ ಇಂತಹ ಕಾರ್ಯಕ್ರಮಗಳು ಸಾಹಿತ್ಯ ವಲಯಕ್ಕೆ ಹೊಸ ಚೈತನ್ಯ ನೀಡುತ್ತವೆ ಎಂದು ಹೇಳಿದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕಸಾಪ ತಾಲ್ಲೂಕು ಘಟಕದ ಮಾಜಿ ಅಧ್ಯಕ್ಷ ಮೂಕಪ್ಪ ಕಟ್ಟಿಮನಿ, ಯುವಜನ ಬಳಗದ ಕಾರ್ಯ ಶ್ಲಾಘನೀಯವಾಗಿದೆ ಎಂದು ತಿಳಿಸಿದರು. ಸಾಹಿತ್ಯ



ಕ್ಷೇತ್ರದಲ್ಲಿ ಯುವಕರು ಹೆಚ್ಚು ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಬಳಿಕ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರೋತ್ಸಾಹಧನ ಪಡೆದ ಸುಪ್ರೀತಾ ಕೆ.ಆರ್ ಅವರ "ಸವಿಭಾವಬಂಧ" ಭಾವಗೀತೆಗಳ ಕೃತಿ ಹಾಗೂ ಗುಂಡಪ್ಪ ರಾಠೋಡ್ ಅವರ "ಕಲ್ಲು ಖಾರದ ಗಲಾಟೆ" ಕವನ ಸಂಕಲನವನ್ನು ವಿಜಯವಾಣಿ ಗಂಗಾವತಿ ಆವೃತ್ತಿಯ ಹಿರಿಯ ಉಪ ಸಂಪಾದಕರಾದ ಅಶೋಕ ನೀಮಕರ್ ಲೋಕಾರ್ಪಣೆ ಮಾಡಿದರು.

ತುರ್ವಿಹಾಳ ಸಪ್ರದ ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಬಾದರ್ ಬಾಷಾ ವಿಶೇಷ ಉಪನ್ಯಾಸ ನೀಡಿ, ಶ್ರೇಷ್ಠತೆ ವ್ಯಸನತೆಯಿಂದ ಹೊರಬರಬೇಕು, ಕಾವ್ಯ ಬರೆಯುವುದು ಮಾತ್ರವಲ್ಲ ಅದನ್ನು ಕಟ್ಟುವ ಸಾಮರ್ಥ್ಯವೂ ಅಗತ್ಯ ಎಂದು ಹೇಳಿದರು. ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಪಿ. ಪರಮೇಶ ಅವರಿಗೆ ವಿಶೇಷ ಸನ್ಮಾನ ನೆರವೇರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ವಿ ಸರ್ಕಾರಿ ಪದವಿ ಕಾಲೇಜಿನ ಸಹಪ್ರಾಧ್ಯಾಪಕ ಡಾ. ಸೈಯದ್ ಮಿನ್ಹಾಜ್ ಉಲ್ ಹಸನ್ ವಹಿಸಿದ್ದರು. ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಸಾಹಿತಿ ಹಾಗೂ ಉಪನ್ಯಾಸಕ ಡಾ. ಬಸವರಾಜ ಸುಂಕೇಶ್ವರ ವಹಿಸಿದ್ದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮಾನ್ವಿ ತಾಲೂಕು ಅಧ್ಯಕ್ಷ ಸುರೇಶ್ ಕುರ್ಡಿ, ಡಾ. ಪ್ರಜ್ಞಾ ಹರಿಪ್ರಸಾದ್, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ತಾಯಪ್ಪ ಬಿ. ಹೊಸೂರು, ಕಸಾಪ ತಾಲೂಕು ಅಧ್ಯಕ್ಷ ಶರಣಬಸವ ನೀರಮಾನ್ವಿ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಶಿವಶಂಕರಗೌಡ ಬಾಗಲವಾಡ, ಯುವಜನ ಬಳಗ ಸಂಚಾಲಕ ಡಾ. ಸೈಯದ್ ಮುಜೀಬ್ ಅಹ್ಮದ್, ರವಿಶರ್ಮ ಜಾನೇಕಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಉಮರ್ ದೇವರಮನಿ, ಶಿವರಾಜ ದಿನ್ನಿ, ಮಹಾಂತೇಶ್ ಗವಿಗಟ್, ಕ್ಷೀರಲಿಂಗ ಬೊಮ್ಮನಾಳ, ಪದ್ಮಾವತಿ ಯಾರಮಸಾಳ್, ಜಾಕೋಟಿ ಕುರ್ಡಿ, ಶ್ರೀನಿವಾಸ ಕುರ್ಡಿ, ಗೋಪಾಲ್ ನಾಯಕ ಟೂಕೂರು, ಡಾ. ಹುಲಿಯಪ್ಪ ದುಮತಿ, ಲಕ್ಷ್ಮಣ ಜಾನೇಕಲ್, ಕಲಾ ಮಾನವಿ, ಬಸವರಾಜ ಜಂಗಮರಹಳ್ಳಿ, ಹರ್ಷವರ್ಧನ, ಅರುಡಾ, ಭಾಗ್ಯಶ್ರೀ ಪಾಟೀಲ್, ಮೌಲಸಾಬ್, ಶಾಮಸುಂದರ್, ಹುಲಗಪ್ಪ ದೊಡ್ಡಮನಿ, ಶಿವಪ್ಪಗೌಡ ಜಾನೇಕಲ್, ವಿ. ಹುಸೇನ್, ಸುರೇಶ ಜಗ್ಗಿ, ಮರಕಮದಿನ್ನಿ ರೇಣುಕಾ, ಚಂದ್ರಮತಿ ಅಲ್ದಾಳ್, ಭಾರ್ಗವಿ ದೇಸಾಯಿ, ಮಮತಾ, ಅರುಣ ಮಲ್ಲಟ, ಎಂ.ಪಿ. ಟಾನ್, ಶಂಕುಸುತ ಮಹಾದೇವ, ರಾಯಚೂರು ಯಾಳಗಿ ಶ್ರೀನಿವಾಸ, ಶಿವಗ್ಯಾನಪ್ಪ ನೀರಲಕೇರಿ, ಅಬ್ದುಲ್ ಏಜಾಜ್ ಸೇರಿದಂತೆ ಹಲವರು ತಮ್ಮ ಕವನ ವಾಚನ ಮಾಡಿದರು. ಕೊನೆಗೆ ಕವನ ವಾಚನ ಮಾಡಿದ ಎಲ್ಲಾ ಕವಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.